ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಮಹಿಳಾ ಏಕದಿನ ವಿಶ್ವಕಪ್ ಫೈನಲ್ ಪಂದ್ಯದ ವೇಳೆ ಭಾರತದ ಸಾಂದರ್ಭಿಕ ಬೌಲರ್ ಶಫಾಲಿ ವರ್ಮಾ ಅವರಿಗೆ ಎರಡು ವಿಕೆಟ್‌ಗಳನ್ನು ಕಳೆದುಕೊಂಡಿದ್ದು ದಕ್ಷಿಣ ಆಫ್ರಿಕಾದ ನಾಯಕಿ ಲಾರಾ ವೋಲ್ವಾರ್ಟ್ ಅವರಿಗೆ ಹತಾಶೆ ಮೂಡಿಸಿದೆ.

04 ನವೆಂಬರ್ 2025 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 234 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ರಾಜ್ಯ ಪ್ರಶಸ್ತಿ : ಅರ್ಹರಿಗೆ ಮುಂದಿನ ದಾರಿ...! » 2


ಬೇಲೂರು ಕ್ಷೇತ್ರಕ್ಕೆ 127.37 ಕೋ.ರೂ. ಅನುದಾನ » 3


ಸತಿ-ಪತಿಗಳಿಬ್ಬರು ಬದುಕಿನ ಬಂಡಿಯ ಚಕ್ರಗಳಿದ್ದಂತೆ » 4

# ಬಿಹಾರ ಚುನಾವಣೆ ಬಳಿಕ ಸಂಪುಟ ಪುನಾರಚನೆ ಚರ್ಚೆ

## ನ.15ರಂದು ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಭೇಟಿ : ಸಿದ್ದರಾಮಯ್ಯ

• ಪ್ರಜೋದಯ ವರದಿ

**ಬೆಂಗಳೂರು:** ಸಂಪುಟ ಪುನಾರಚನೆ ಬಗ್ಗೆ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರೊಟ್ಟಿಗೆ ಚರ್ಚೆ ಮಾಡುತ್ತೇನೆ. ಅದಕ್ಕಾಗಿಯೇ ನ.15ಕ್ಕೆ ದೆಹಲಿಗೆ ಹೋಗುತ್ತಿದ್ದೇನೆ. ಸಂಪುಟ ಪುನಾರಚನೆ ಬಗ್ಗೆ ಹೈಕಮಾಂಡ್ ಏನು ಹೇಳುತ್ತದೆಯೋ ಆ ರೀತಿ ನಡೆದುಕೊಳ್ಳುತ್ತೇನೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಸೋಮವಾರ ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಉಪ ಮುಖ್ಯಮಂತ್ರಿ ಶಿವಕುಮಾರ್ ಅವರು ಮುಖ್ಯಮಂತ್ರಿ ಯಾಗಲಿ ಎಂಬ ಬಿಹಾರ ಮುಖಂಡರ ಹೇಳಿಕೆಗೆ ಕಾಂಗ್ರೆಸ್ ಹೈ ಕಮಾಂಡ್ ಈ ಬಗ್ಗೆ ಏನಾದರೂ ಹೇಳಿದೆಯೇ ಎಂದು ಕಿಡಿಕಾರಿದ ಅವರು, ಯಾರು ಏನೇ ಹೇಳಿದರೂ ಅದು ಮುಖ್ಯವಲ್ಲ.

- ಡಿ.ಕೆ.ಶಿ. ಮುಖ್ಯಮಂತ್ರಿ ಯಾಗಲಿ ಎಂಬ ಬಿಹಾರ ಮುಖಂಡರ ಹೇಳಿಕೆಗೆ ಕಿಡಿ
- ಯಾರು ಏನೇ ಹೇಳಿದರೂ ಮುಖ್ಯವಲ್ಲ
- ಕಾಂಗ್ರೆಸ್ ಹೈಕಮಾಂಡ್ ಹೇಳುವುದಷ್ಟೇ ಮುಖ್ಯ

ಕಾಂಗ್ರೆಸ್ ಹೈಕಮಾಂಡ್ ಹೇಳುವುದಷ್ಟೇ ಮುಖ್ಯ. ಈ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಏನಾದರೂ ಹೇಳಿದ್ಯಾ, ಯಾಕೆ ಪದೇ ಪದೇ ಅದನ್ನೇ ಮಾತನಾಡುತ್ತೀರಾ. ಜನ ಮಾತನಾಡುತ್ತಿಲ್ಲ, ಮಾಧ್ಯಮದವರೇ ಪದೇ ಪದೇ ಮಾತನಾಡುತ್ತಿದ್ದಾರೆ. ಕಾಂಗ್ರೆಸ್‌ಗೆ ಹೈಕಮಾಂಡ್ ಇದೆ. ಹೈಕಮಾಂಡ್ ಹೇಳುವುದು ಮಾತ್ರವೇ ಮುಖ್ಯ, ಅದೇ ಅಂತಿಮ. ನಾನು ಬಿಹಾರ ಚುನಾವಣೆ ಬಳಿಕ ರಾಹುಲ್ ಗಾಂಧಿ



ಅವರನ್ನ ಭೇಟಿ ಮಾಡುತ್ತೇನೆಂದು ಹೇಳಿದರು.

**ಪ್ರಚಾರಕ್ಕೆ ಕರೆದರೆ ಹೋಗುವೆ**

ಇದೇ ವೇಳೆ ಬಿಹಾರ ಚುನಾವಣಾ ಪ್ರಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿದ ಅವರು, ಪ್ರಚಾರಕ್ಕೆ ಇಲ್ಲಿಯವರೆಗೆ ನನ್ನನ್ನು ಆಹ್ವಾನಿಸಿಲ್ಲ. ಕರೆದರೆ ಹೋಗುತ್ತೇನೆ. ಬಿಹಾರದಲ್ಲಿ ಈ ಬಾರಿ ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬರುತ್ತದೆ. ನಿತೀಶ್ ಕುಮಾರ್ ಬಗ್ಗೆ ಜನಕ್ಕೆ ಬೇಸರ ಬಂದಿದೆ. ಏಕೆಂದರೆ, ಅವರಿಗೆ ಯಾವುದೇ ಸಿದ್ಧಾಂತವಿಲ್ಲ. ಅವರು ಎಲ್ಲಾ ಪಕ್ಷಗಳನ್ನು ಬದಲಾಯಿಸಿದ್ದಾರೆ. ಈ ಕಾರಣ ಜನ ಇಂಡಿಯಾ ಒಕ್ಕೂಟದ ಪರ ಮತ ಹಾಕುತ್ತಾರೆಂದು ವಿಶ್ವಾಸ ವ್ಯಕ್ತಪಡಿಸಿದರು.

ನಮ್ಮ ಗ್ಯಾರಂಟಿಗಳನ್ನೇ ಬಿಹಾರದಲ್ಲಿ ನಿತೀಶ್ ಕುಮಾರ್ ಅವರು ಘೋಷಣೆ ಮಾಡಿದ್ದಾರೆ. ಆದರೂ ಅಲ್ಲಿಯ ಜನ ಅವರ ಕೈ ಹಿಡಿಯುವುದಿಲ್ಲ. ಕರ್ನಾಟಕದಲ್ಲಿ ಬಿಹಾರದ ಮತದಾರರು ಇದ್ದಾರೆ. ಅವರಿಗೂ ನಮ್ಮ ಒಕ್ಕೂಟಕ್ಕೆ ಮತ ಹಾಕಿ ಎಂದು ಕೇಳುತ್ತೇವೆ ಎಂದರು.

### ಡಿಸಿಎಂ ಸ್ಥಾನ ಕೊಡೋದಾದ್ರೆ ಸಿದ್ಧ : ಜಮೀರ್

ನನ್ನನ್ನು ಉಪಮುಖ್ಯಮಂತ್ರಿ ಮಾಡುವಂತೆ ಜನರು ಒತ್ತಾಯ ಮಾಡುತ್ತಿದ್ದಾರೆ. ಹೈಕಮಾಂಡ್ ನನ್ನ ಡಿಸಿಎಂ ಮಾಡಿದರೆ ನಿಭಾಯಿಸುತ್ತೇನೆಂದು ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದ್ದಾರೆ. ನನಗೆ ಯಾವುದೇ ಜವಾಬ್ದಾರಿ ಕೊಟ್ಟರೂ ನಿಭಾಯಿಸುತ್ತೇನೆ. ನಾನು ಎರಡೂವರೆ ವರ್ಷ ಮಂತ್ರಿ ಆಗಿದ್ದು, ಸಚಿವ ಸ್ಥಾನ ಬಿಟ್ಟು ಪಕ್ಷದ ಕೆಲಸ ಮಾಡು ಅಂದರೂ ನಾನು ಸಿದ್ಧ. ಪಕ್ಷದ ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದಿದ್ದಾರೆ. ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ. ಮುಖ್ಯಮಂತ್ರಿ ಬದಲಾವಣೆ ಸಂಬಂಧ ಯಾವ ಒಪ್ಪಂದವೂ ಆಗಿಲ್ಲ. 2028ರವರೆಗೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿರುತ್ತಾರೆ. ನಮ್ಮದು ಹೈಕಮಾಂಡ್ ಪಕ್ಷ, ನಾನು ಪಕ್ಷದ ಶಿಸ್ತಿನ ಸಿಪಾಯಿ. ಹೈಕಮಾಂಡ್ ಹಾಕಿದ ಗೆರೆಯನ್ನು ನಾವು ದಾಟುವುದಿಲ್ಲ ಎಂದಿದ್ದಾರೆ.

# ಸಿ.ಎಂ. ಬದಲಾವಣೆ ಹೈಕಮಾಂಡ್‌ಗೆ ಬಿಟ್ಟಿದ್ದು

• ಪ್ರಜೋದಯ ವರದಿ

**ಅರಸೀಕೆರೆ:** ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಹಾಗು ಸಚಿವ ಸಂಪುಟ ವಿಸ್ತರಣೆ ವಿಚಾರ ಹೈಕಮಾಂಡ್‌ಗೆ ಬಿಟ್ಟಿದ್ದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಹೇಳಿದರು.

ತಾಲೂಕಿನ ಅಗ್ಗುಂದ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಸುದ್ದಿ ಬಿತ್ತರ ಮಾಡೋದು ನಿಮ್ಮ ಹಕ್ಕು. ಆದರೆ, ನಮ್ಮ ಹೈ ಕಮಾಂಡ್ ಏನಾದರೂ ಹೇಳಿದೆಯಾ, ಮಲ್ಲಿಕಾರ್ಜುನ ಖರ್ಗೆ ಹೇಳಿದಾರಾ, ರಾಹುಲ್, ಸೋನಿಯಾಗಾಂಧಿ ಹೇಳಿದಾರಾ ಎಂದು ಪ್ರಶ್ನಿಸಿ, ಅವರು ಹೇಳಿದ ಮೇಲೆ ಏನಾದರೂ ಕೇಳಿದರೆ ಹೇಳಬಹುದು ಎಂದರು.

ಹೈ ಕಮಾಂಡ್ ಒಪ್ಪಿದರೆ ಐದು ವರ್ಷ ನಾನೇ ಮುಖ್ಯಮಂತ್ರಿ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಸಿದ್ದರಾಮಯ್ಯ ಅವರು ಯಾವಾಗಲೂ ಕೂಡ ನಾನೇ



### ಕೆ.ಎಂ.ಶಿ. ಸಚಿವರಾಗಲು ಅರ್ಹರು

ಅರಸೀಕೆರೆ ಶಾಸಕ ಶಿವಲಿಂಗೇಗೌಡ ಅವರು ಸಚಿವ ಸ್ಥಾನದ ಆಕಾಂಕ್ಷಿಯಲ್ಲ. ಅವರು ನಮ್ಮ ನಾಯಕರು, ಸಚಿವರಾಗಲು ಅರ್ಹರು. ಶಿವಲಿಂಗೇಗೌಡ ಸೋಲಿಲ್ಲದ ಸರದಾರ ಆಗಿದ್ದಾರೆ. ಅವರಿಗೆ ಸಚಿವ ಸ್ಥಾನ ಕೊಡೋದು, ಬಿಡೋದು ಮುಖ್ಯಮಂತ್ರಿ, ಕೆಪಿಸಿಸಿ, ಹೈ ಕಮಾಂಡ್ ತೀರ್ಮಾನ ಮಾಡುತ್ತೆ ಎಂದು ಹೇಳಿದರು.

ಮುಖ್ಯಮಂತ್ರಿ ಆಗುತ್ತೇನೆಂದು ಮೊದಲು ಹೇಳಿಲ್ಲ. ಯಾವಾಗಲೂ ನಮ್ಮಲ್ಲಿ ಒಂದು ಸಿಸ್ಟಮ್ ಇದೆ, ಸಿಎಲ್‌ಪಿ ಸಭೆ ಕರೆಯುತ್ತೇವೆ, ಹೈಕಮಾಂಡ್ ವೀಕ್ಷಕರನ್ನು ಕಳುಹಿಸುತ್ತಾರೆ, ಆನಂತರ ಯಾರು ಮುಖ್ಯಮಂತ್ರಿ ಎಂದು ತೀರ್ಮಾನವಾಗುತ್ತೆ. ಆ ನಿರ್ಧಾರ ಈಗಲೂ ನಡೆಯುತ್ತಿದೆ ಎಂದರು.

ಈಗ ಸಿಎಲ್‌ಪಿ ಸಭೆ ತಯಾರಿ ಆಗಿದೆತೇ ಎಂಬ ಪ್ರಶ್ನೆಗೆ, ಯಾವುದೇ ಪ್ರಶ್ನೆ ಕೇಳಿ ಕಡೆಯಿಂದ ಉತ್ತರ ಪಡೆಯಲು ಆಗಲ್ಲ. ಈ ಬಗ್ಗೆ ಮಾತಾಡಲು ನನಗೆ ಅಧಿಕಾರ ಇಲ್ಲ. ಅದಕ್ಕೆ ಹೈಕಮಾಂಡ್ ಇದೆ ಎಂದರು.

# ಸೋಲಾರ್ ಪಾರ್ಕ್‌ನಿಂದ ಲಕ್ಷಾಂತರ ರೈತರಿಗೆ ಅನುಕೂಲ

## 400 ಕೋ.ರೂ. ವೆಚ್ಚದಲ್ಲಿ ನಿರ್ಮಾಣ : ಕೆ.ಎಂ.ಶಿವಲಿಂಗೇಗೌಡ

• ಪ್ರಜೋದಯ ವರದಿ

**ಅರಸೀಕೆರೆ:** ತಾಲ್ಲೂನಲ್ಲಿ 400 ಕೋ. ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಸೋಲಾರ್ ಪಾರ್ಕ್ ಯೋಜನೆಯಿಂದ ಲಕ್ಷಾಂತರ ರೈತರಿಗೆ ಅನುಕೂಲವಾಗಲಿದೆ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೋಲಾರ್ ಪಾರ್ಕ್ ನಿರ್ಮಾಣದಿಂದ ಕೃಷಿ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ಸಿಗಲಿದೆ. ಇದರಿಂದ ಎಲ್ಲಾ ರೀತಿಯ ಬೆಳೆ ಬೆಳೆಯುವುದರ ಜೊತೆಗೆ ಅದರಿಂದ ಆರ್ಥಿಕ ಲಾಭ ಹೊಂದಬಹುದು. ಆರ್ಥಿಕ ಬಲವರ್ಧನೆಯಿಂದ ನಮ್ಮ ರೈತರಿಗೂ ಅನುಕೂಲ ಆಗಲಿದೆ. ಇದರ ಜೊತೆಗೆ ಎತ್ತಿನ ಹೊಳೆ ಯೋಜನೆಯಿಂದಲೂ ಲಾಭ ಆಗಲಿದೆ ಎಂಬ ಕಾರಣದಿಂದಲೇ ಎಲ್ಲಾ ರೀತಿಯ ಅಡೆತಡೆ ನೀಡಿ ಯೋಜನೆ ಸಾಕಾರಕ್ಕೆ ಒತ್ತು ನೀಡಲಾಗುತ್ತಿದೆ ಎಂದು ಹೇಳಿದರು.



ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಸೋಲಾರ್ ಪಾರ್ಕ್ ಕೇಂದ್ರವು ಸುತ್ತಮುತ್ತಲಿನ ಗ್ರಾಮಗಳ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಿ, ಜನಜೀವನ ಸುಧಾರಣೆಗೆ ಪೂರಕವಾಗಲಿದೆ. ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಹಲವು ಜನಪರ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದೆ. ಪಂಚ ಗ್ಯಾರಂಟಿಗಳಲ್ಲಿ ಒಂದಾದ 200 ಯೂನಿಟ್ ಉಚಿತ ವಿದ್ಯುತ್ ಯೋಜನೆಯಿಂದ ಲಕ್ಷಾಂತರ ಕುಟುಂಬಗಳು ನೆಮ್ಮದಿಯ ಜೀವನ ಸಾಗಿಸುತ್ತಿವೆ ಎಂದರು.

ಅರಸೀಕೆರೆ ಕ್ಷೇತ್ರದ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರ ಅಭಿವೃದ್ಧಿ ಚಿಂತನೆ ಮತ್ತು ದೂರದೃಷ್ಟಿ ತಾಲ್ಲೂಕಿನ ಪ್ರಗತಿಗೆ ಪೂರಕವಾಗಿವೆ. ನಮ್ಮ ಕಾಂಗ್ರೆಸ್ ಸರ್ಕಾರ ಯಾವಾಗಲೂ ಜನಪರವಾಗಿದ್ದು, ಜನರ ವಿಶ್ವಾಸವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಬದ್ಧವಾಗಿದೆ ಎಂದು ಹೇಳಿದರು.

# ರಾಜ್ಯದಲ್ಲಿ 2,400 ಮೆಗಾವ್ಯಾಟ್ ಸೌರಶಕ್ತಿ ಉತ್ಪಾದನೆ

## ವಿದ್ಯುತ್ ಅಭಾವ ಇಲ್ಲ, ನೂರು ಸಬ್‌ಸ್ಟೇಷನ್ ನಿರ್ಮಾಣ | ಇಂಧನ ಸಚಿವ ಕೆ.ಜೆ.ಜಾರ್ಜ್ ಭರವಸೆ

• ಪ್ರಜೋದಯ ವರದಿ

**ಅರಸೀಕೆರೆ:** ಕುಸುಮ್-ಸಿ ಯೋಜನೆಯಡಿಯಲ್ಲಿ ರಾಜ್ಯದಲ್ಲಿ 2,400 ಮೆಗಾವ್ಯಾಟ್ ಸೌರಶಕ್ತಿ ವಿದ್ಯುತ್ ಉತ್ಪಾದನೆಗೆ ಕ್ರಮ ವಹಿಸಲಾಗಿದೆ. ಇದರಿಂದ ರೈತರ ಪಂಪ್‌ಸೆಟ್‌ಗೆ ನಿತ್ಯ ಏಳು ಗಂಟೆ ವಿದ್ಯುತ್ ಕೊಡುವ ಯೋಜನೆ ರೂಪಿಸಲಾಗಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ಹೇಳಿದರು.

ತಾಲ್ಲೂಕಿನ ಸಂಕೋಡನಹಳ್ಳಿ ಗ್ರಾಮದಲ್ಲಿ ಕುಸುಮ್-ಸಿ ಯೋಜನೆಯಡಿಯಲ್ಲಿ 25 ಎಕರೆ ವಿಸ್ತೀರ್ಣದ ಸೌರ ಉದ್ಯಾನವನದ ನಿರ್ಮಾಣ ಕಾರ್ಯವನ್ನು ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ವಿದ್ಯುತ್ ಅಭಾವ ಇಲ್ಲ, ಬೇಡಿಕೆಗೆ ತಕ್ಕಷ್ಟು ಇದೆ. ಆದರೆ, ವಿತರಣೆಗೆ ಬೇಕಾದ ಸಬ್‌ಸ್ಟೇಷನ್‌ಗಳೆ ಸಮಸ್ಯೆ ಇದೆ. ಹಾಗಾಗಿ ಈ ವರ್ಷ ನೂರು ಸಬ್ ಸ್ಟೇಷನ್ ನಿರ್ಮಾಣಕ್ಕೆ ಕೆಲಸ ನಡೆದಿದೆ ಎಂದು ತಿಳಿಸಿದರು.



### ವಿದ್ಯುತ್ ವಿತರಣಾ ಕೇಂದ್ರ ಉದ್ಘಾಟನೆ

ಅರಸೀಕೆರೆ ತಾಲ್ಲೂಕಿನ ಅಗ್ಗುಂದ ಗ್ರಾಮದಲ್ಲಿ ಹೊಸದಾಗಿ ನಿರ್ಮಿಸಲಾದ 110/11 ಕೆವಿ ವಿದ್ಯುತ್ ವಿತರಣಾ ಕೇಂದ್ರವನ್ನು ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಉದ್ಘಾಟಿಸಿದರು. ಇದನ್ನು ಕೆಪಿಟಿಸಿಎಲ್ ನಿರ್ವಹಿಸುತ್ತಿದ್ದು, ಈ ಕೇಂದ್ರವು ಈ ಪ್ರದೇಶದಲ್ಲಿ ವಿದ್ಯುತ್ ವಿತರಣಾ ಜಾಲವನ್ನು ಸುಧಾರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ. ಇಲ್ಲಿನ ನಿವಾಸಿಗಳಿಗೆ ಉತ್ತಮ ವಿದ್ಯುತ್ ಸೌಕರ್ಯ ಒದಗಿಸಲು ಹಾಗೂ ಸಮಗ್ರ ಗುಣಮಟ್ಟ ಸುಧಾರಣೆಗೆ ದಾರಿ ಮಾಡಿಕೊಡಲಿದೆ ಎಂದು ಸಚಿವರು ತಿಳಿಸಿದರು.

ನಾನು ಪ್ರಗತಿ ಪರಿಶೀಲನಾ ಸಭೆ ಮಾಡುವಾಗಲೆಲ್ಲಾ ಸಬ್‌ಸ್ಟೇಷನ್ ಸಮಸ್ಯೆ ಹೆಚ್ಚಾಗಿ ಕೇಳಿ ಬರುತ್ತಿತ್ತು. ಅದಕ್ಕಾಗಿ ಒತ್ತು ನೀಡಲಾಗಿದೆ. ಇದರಿಂದ ರೈತರ ಪಂಪ್‌ಸೆಟ್‌ಗೆ ಗುಣಮಟ್ಟದ ವಿದ್ಯುತ್ ಸಿಗಲಿದೆ. ಅರಸೀಕೆರೆ ಕ್ಷೇತ್ರದಲ್ಲಿಯೂ ಕೂಡ ಈ ಯೋಜನೆ ಜಾರಿ ಮಾಡಲಾಗುತ್ತಿದೆ ಎಂದು ಹೇಳಿದರು.

> 2400 ಮೆಗಾವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದನೆಗೆ ಹತ್ತು ಸಾವಿರ ಕೋಟಿ ವೆಚ್ಚ ಮಾಡಲಾಗುತ್ತಿದೆ. ಶೀಘ್ರವಾಗಿ ಕಾಮಗಾರಿ ಮುಗಿಸಲು ಕ್ರಮ ವಹಿಸುತ್ತೇವೆ. ಹಿಂದೆ ಬರ ಪರಿಸ್ಥಿತಿ ಇದ್ದಾಗಲೇ ವಿದ್ಯುತ್ ಸಮಸ್ಯೆ ಆಗಿಲ್ಲ. ಈ ವರ್ಷ ಕೂಡ ಬೇಸಿಗೆಗೆ ವಿದ್ಯುತ್ ಸಮಸ್ಯೆ ಇಲ್ಲ, ಆಗುವುದೂ ಇಲ್ಲ.
> – ಕೆ.ಜೆ.ಜಾರ್ಜ್, ಇಂಧನ ಸಚಿವ

ಬೆಂಗಳೂರಿನಲ್ಲಿ ಟನಲ್ ನಿರ್ಮಾಣಕ್ಕೆ ಬಿಜೆಪಿ ವಿರೋಧ ವಿಚಾರವಾಗಿ ಪ್ರತಿಕ್ರಿಯಿಸಿ, ಹಿಂದೆ ಸ್ಟೀಲ್ ಬ್ರಿಡ್ಜ್‌ಗೆ ಕೂಡ ವಿರೋಧ ವ್ಯಕ್ತವಾಗಿತ್ತು. ಸ್ಟೀಲ್ ಇಲ್ಲದೆ ಏನೂ ಆಗಲ್ಲ. ಶಿವಾನಂದ ಸರ್ಕಲ್‌ನಲ್ಲಿ ಸ್ಟೀಲ್ ಬ್ರಿಡ್ಜ್ ಇದೆ. ಅದು ಸ್ಟೀಲ್ ತರ

» ನಾಲ್ಕನೇ ಪುಟದಲ್ಲಿ

# ಹೋರಾಟದಿಂದಷ್ಟೇ ಮಹಿಳೆಯರಿಗೆ ಜಯ ಸಾಧ್ಯ

## ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌದರಿ | ವಿದ್ಯಾರ್ಥಿಗಳೊಂದಿಗೆ ಸಂವಾದ

• ಪ್ರಜೋದಯ ವರದಿ

**ಹಾಸನ:** ಮಹಿಳೆಯರು ಆರ್ಥಿಕವಾಗಿ ಸದೃಢರಾದರೆ ಮಾತ್ರ ಒಳ್ಳೆಯ ಬದುಕು ಕಟ್ಟಿಕೊಳ್ಳಲು ಸಾಧ್ಯವಿದ್ದು, ಓದುವ ವಯಸ್ಸಿನಲ್ಲಿ ಬೇರೆ ಕಡೆಗೆ ಗಮನ ಹರಿಸದೆ ಗುರಿ ತಲುಪಲು ಪ್ರಯತ್ನಿಸಬೇಕು. ಹೋರಾಟದಿಂದ ಮಾತ್ರ ಜಯ ಗಳಿಸಲು ಸಾಧ್ಯವೆಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌದರಿ ಅವರು ಹೇಳಿದರು.

ಸೋಮವಾರ ನಗರದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹೆಣ್ಣು ಯಾವಾಗ ಆರ್ಥಿಕವಾಗಿ ಸಬಲೆಯಾಗುತ್ತಾಳೋ ಅಂದು



ನಾಡು, ದೇಶ ಸಬಲವಾಗುತ್ತದೆ. ಶಿಕ್ಷಣದಿಂದ ಮಾತ್ರ ಸಾಧನೆ, ಗೌರವ ಆರ್ಥಿಕ ಸಬಲೀಕರಣ. ಗುರಿ ಸಾಧಿಸಬೇಕಾದರೆ ಮೊಬೈಲ್‌ನಿಂದ ದೂರ ವಿರಬೇಕು.

**ಪೊಲೀಸ್ ಠಾಣೆ ತವರಿಗಿಂತ ಹೆಚ್ಚು**

ಅಪರಿಚಿತ ವ್ಯಕ್ತಿಗಳಿಂದ ಮಹಿಳೆಯರು ತೊಂದರೆಗೆ ಸಿಲುಕಿದರೆ ಧೈರ್ಯಗೆಡದೆ ತಂದೆ-ತಾಯಿಗೆ ತಿಳಿಸಬೇಕು. ನಂತರ ಪೊಲೀಸ್ ಠಾಣೆಗೆ ದೂರು ನೀಡಿ ಸಮಸ್ಯೆಗೆ ಪರಿ ಹಾರ ಕಂಡುಕೊಳ್ಳಬೇಕೆಂದು ಪೊಲೀಸ್ ಠಾಣೆ ಮಹಿಳೆಯರಿಗೆ ತವರಿಗಿಂತ ಹೆಚ್ಚು, ಸಮಸ್ಯೆಯಾದಾಗ ತಂದೆ-ತಾಯಿಗಿಂತ ಮೊದಲು ಪೊಲೀಸರು ಬರುತ್ತಾರೆ. ಆದ್ದರಿಂದ ಎಲ್ಲರೂ ಸಹಾಯವಾಣಿ ಸಂಖ್ಯೆಯನ್ನು ಮೊಬೈಲ್‌ನಲ್ಲಿಟ್ಟುಕೊಳ್ಳಬೇಕು. ಅರಿವು ಪಡೆದ ಹೆಣ್ಣು ಮಕ್ಕಳು ಜ್ಞಾನದ, ಗೌರವ, ಸಾಧನೆಯ ಸಂಕೇತ ಪ್ರತಿ ಮಹಿಳೆಯರು ತಮ್ಮ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಹೆಸರು, ದೂರವಾಣಿ ಸಂಖ್ಯೆಯನ್ನು ತಿಳಿದುಕೊಂಡಿರಬೇಕು. ಠಾಣೆಯಲ್ಲಿ ಸ್ಪಂದಿಸದಿದ್ದಾಗ ಪೊಲೀಸ್ ವರಿಷ್ಠಾಧಿಕಾರಿ ಹತ್ತಿರ ಹೋಗಿ ಸಮಸ್ಯೆ ಸಲ್ಲಿಸಿ ಎಂದರು.

» ನಾಲ್ಕನೇ ಪುಟದಲ್ಲಿ

# ರೈತ ಆತ್ಮಹತ್ಯೆ

• ಪ್ರಜೋದಯ ವರದಿ

ಹಾಸನ: ಸಾಲ ಬಾಧೆ ತಾಳದೆ ರೈತ ನೇಣಿಗೆ ಶರಣಾಗಿರುವ ಘಟನೆ ತಾಲ್ಲೂಕಿನ ಗಾಡೇನಹಳ್ಳಿಯಲ್ಲಿ ನಡೆದಿದೆ.

ಸತೀಶ್ (50) ಮೃತರು. ಕೃಷಿ ಚಟುವಟಿಕೆಗಾಗಿ ಫೈನಾನ್ಸ್‌ನಲ್ಲಿ ಸಾಲ ಪಡೆದು ಟ್ರ್ಯಾಕ್ಟರ್ ತಂದಿದ್ದ ಸತೀಶ್ ವಿವಿಧ ಬ್ಯಾಂಕ್‌ಗಳಲ್ಲೂ ಸಾಲ ಮಾಡಿಕೊಂಡಿದ್ದರು. ಜೊತೆಗೆ ಹೃದಯ ಸಂಬಂಧಿ ಕಾಯಿಲೆಯಿಂದಲೂ ಬಳಲುತ್ತಿದ್ದರು. ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅನಾರೋಗ್ಯ ಹಾಗು ಸಾಲದ ಬಾಬ್ತು ಹೆಚ್ಚುತ್ತಲೇ ಇದ್ದರಿಂದ ಜಿಗುಪ್ಸೆಗೊಂಡ ಅವರು ಮನೆಯ ಹಿಂಭಾಗದ ಕೊಟ್ಟಿಗೆಯಲ್ಲಿ ಭಾನುವಾರ ನೇಣು ಹಾಕಿಕೊಂಡಿದ್ದಾರೆ. ಮೃತರಿಗೆ ಪತ್ನಿ, ಇಬ್ಬರು ಮಕ್ಕಳಿದ್ದಾರೆ. ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸಂಜೀವಿನಿ ಸಹಕಾರಿ ಆಸ್ಪತ್ರೆ ಅಧ್ಯಕ್ಷ ಸ್ವರೂಪ್ ಮರು ಆಯ್ಕೆ

• ಪ್ರಜೋದಯ ವರದಿ

ಹಾಸನ: ಸಂಜೀವಿನಿ ಸಹಕಾರಿ ಆಸ್ಪತ್ರೆ ಹಾಗು ಸಂಶೋಧನಾ ಕೇಂದ್ರದ ಅಧ್ಯಕ್ಷರಾಗಿ ಶಾಸಕ ಹೆಚ್.ಪಿ.ಸ್ವರೂಪ್ ಅವರು ಎರಡನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಸುರೇಶ್ ಹಾಗು 13 ಮಂದಿ ನಿರ್ದೇಶಕರು ಸೋಮವಾರ ಅಧಿಕಾರ ವಹಿಸಿಕೊಂಡರು.

ಈ ವೇಳೆ ಮಾತನಾಡಿದ ಶಾಸಕ ಹೆಚ್.ಪಿ.ಸ್ವರೂಪ ಅವರು, ಹಾಸನದ ಸಂಜೀವಿನಿ ಸಹಕಾರಿ ಆಸ್ಪತ್ರೆ ಹಾಗು ಸಂಶೋಧನಾ ಕೇಂದ್ರ ರಾಜ್ಯದಲ್ಲಿ ಎರಡನೇ ಸ್ಥಾನ ಪಡೆದುಕೊಂಡಿದೆ. 1988ರಲ್ಲಿ ಸ್ಥಾಪನೆಗೊಂಡು ಈವರೆಗೆ ಸಾಕಷ್ಟು ಸಮಾಜಮುಖಿ ಕೆಲಸಗಳಲ್ಲಿ ತೊಡಗಿಕೊಂಡಿರುವ ಈ ಸಂಸ್ಥೆಗೆ ದಿವಂಗತ ಡಾ||ಗುರುರಾಜ್ ಹೆಬ್ಬಾರ್, ಡಾ||ಮುನಿವೆಂಕಟೇಗೌಡ, ಹೆಚ್.ಎಸ್.ಪ್ರಕಾಶ್ ಸೇರಿ ಹಲವರು ಭದ್ರಬುನಾದಿ ಹಾಕಿ ಕೊಟ್ಟಿದ್ದಾರೆಂದು



ಸ್ಮರಿಸಿದರು.

ಹಲವರ ಶ್ರಮದಿಂದ ಸಂಸ್ಥೆ ಬೃಹತ್ ಮಟ್ಟದಲ್ಲಿ ಬೆಳೆಯುತ್ತಿದ್ದು, ನಮ್ಮ ಅವಧಿಯಲ್ಲಿ ಕೂಡ ಕೆ.ಆರ್.ಪುರಂನಲ್ಲಿ ನಿವೇಶನ ಖರೀದಿ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಆ ಜಾಗದಲ್ಲಿ ಹೃದಯ ರೋಗಿಗಳಿಗೆ ಸಂಬಂಧಪಟ್ಟ ಆಸ್ಪತ್ರೆ ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗಿದೆ ಜೊತೆಗೆ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣಕ್ಕೂ ತಯಾರಿ ನಡೆದಿದೆ. ಮುಂದಿನ ದಿನಗಳಲ್ಲಿ ಆಸ್ಪತ್ರೆಯನ್ನು ದೊಡ್ಡ ಮಟ್ಟದಲ್ಲಿ ಬೆಳೆಸುವ ಸಲುವಾಗಿ ಶ್ರಮ ವಹಿಸಲಾಗುವುದು ಎಂದರು.

ಕಳೆದ ಬಾರಿಯ 8 ಮಂದಿ ನಿರ್ದೇಶಕರು ಈ ಬಾರಿಯೂ ಮುಂದುವರೆದಿದ್ದು, ಇನ್ನುಳಿದ ಐದು ಮಂದಿ ಹೊಸದಾಗಿ ಸೇರ್ಪಡೆ ಆಗಿದ್ದಾರೆ. ಎಲ್ಲಾ ನಿರ್ದೇಶಕರ ಹಾಗು ಷೇರುದಾರರ ಸಹಕಾರದಿಂದ ಮತ್ತೆ ಎರಡನೇ ಬಾರಿಗೆ ಸಂಸ್ಥೆಯ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೇನೆ. ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದ ತಿಳಿಸುವುದಾಗಿ ಹೇಳಿದರು.

# ಕಬ್ಬಳಿ ಪುಷ್ಕರಣಿಯಲ್ಲಿ ಚುಂಚಶ್ರೀಗಳ ವೈಭವದ ತೆಪ್ಪೋತ್ಸವ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಶ್ರೀ ಕ್ಷೇತ್ರ ಕಬ್ಬಳಿಯಲ್ಲಿ ಬಸವೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವ ಪ್ರಯುಕ್ತ ಸೋಮವಾರ ರಾತ್ರಿ ಚುಂಚಶ್ರೀಗಳ ಮುತ್ತಿನ ಪಲ್ಲಕ್ಕಿ ಉತ್ಸವ ಹಾಗು ಪುಷ್ಕರಣಿಯಲ್ಲಿ ತೆಪ್ಪೋತ್ಸವ ವೈಭವದಿಂದ ನಡೆಯಿತು.

ಸಂಜೆ 6.30ರಲ್ಲಿ ಶ್ರೀ ಬಸವೇಶ್ವರ ಸ್ವಾಮಿ ಸರ್ಪೋತ್ಸವ, ಶ್ರೀ ಚೌಡೇಶ್ವರಿದೇವಿ ಉತ್ಸವ, ಜಗದ್ಗುರು ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪುತ್ಥಳಿಕೆ, ಶ್ರೀ ನಿರ್ಮಲಾನಂದ ನಾಥ ಸ್ವಾಮೀಜಿ ಮುತ್ತಿನ ಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ನಂತರ ದೇಗುಲದ ಆವರಣದಲ್ಲಿರುವ ಪುಷ್ಕರಣಿಯಲ್ಲಿ ಚುಂಚಶ್ರೀ ಗಳ ತೆಪ್ಪೋತ್ಸವ ವೈಭವ ದಿಂದ ಸಾಗಿತು. ಭಕ್ತರು ಜಯಘೋಷ ಮೊಳಗಿಸಿದರು.

ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಕಬ್ಬಳಿ ಶಾಖಾ ಮಠದ ಶ್ರೀ ಶಿವಪುತ್ರನಾಥ ಸ್ವಾಮೀಜಿ, ಶ್ರೀ ಗುರುಲಿಂಗ ಸ್ವಾಮೀಜಿ, ಗುಡಿಗೌಡ ಪ್ರಕಾಶ್, ಶಾಸಕ ಸಿ.ಎನ್.ಬಾಲಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಶಿವನಂಜೇಗೌಡ, ಎನ್.ಆರ್.ರತ್ನರಾಜ್ ಇತರರಿದ್ದರು.

## ಒಂದು ತಿಂಗಳಲ್ಲಿ 193 ಜನರಷ್ಟೇ ಭಾಗಿ | ಮನವೊಲಿಕೆಗೆ ಅಧಿಕಾರಿಗಳ ಕಸರತ್ತು

# ಸಮೀಕ್ಷೆಗೆ ನಿರಾಸಕ್ತಿ ತೋರುತ್ತಿರುವ ತೃತೀಯ ಲಿಂಗಿಗಳು

• ಪ್ರಜೋದಯ ವರದಿ

**ಹಾಸನ:** ತೃತೀಯ ಲಿಂಗಿಗಳಿಗೂ ಸರ್ಕಾರದ ಸವಲತ್ತುಗಳು ತಲುಪಬೇಕು. ಅವರು ಎಲ್ಲರಂತೆ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಬೇಕೆಂಬ ಉದ್ದೇಶದಿಂದ ರಾಜ್ಯದಲ್ಲೇ ಮೊದಲ ಬಾರಿಗೆ ಕೈಗೊಂಡಿರುವ ತೃತೀಯ ಲಿಂಗಿಗಳ ಸಮೀಕ್ಷೆಗೆ ಜಿಲ್ಲೆಯಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಅ.1 ರಿಂದ 45 ದಿನಗಳವರೆಗೆ ಸಮೀಕ್ಷೆ ನಡೆಸಲಾಗುತ್ತಿದೆ. ಜಿಲ್ಲೆಯಲ್ಲಿ 400 ತೃತೀಯ ಲಿಂಗಿಗಳು ಇದ್ದಾರೆಂಬ ಅಂದಾಜು ಇದೆಯಾದರೂ ಇದುವರೆಗೆ 193 ಜನರು ಮಾತ್ರ ಸರ್ವೆಯಲ್ಲಿ ಭಾಗವಹಿಸಿದ್ದಾರೆ. ಉಳಿದವರು ಸಮೀಕ್ಷೆಯಲ್ಲಿ ಪಾಲ್ಗೊಳ್ಳಲು ಹಿಂದೇಟು ಹಾಕುತ್ತಿರುವುದು ಅಧಿಕಾರಿಗಳನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಲೈಂಗಿಕ ಅಲ್ಪಸಂಖ್ಯಾತರಿಗಾಗಿಯೇ ಜಾರಿಯಲ್ಲಿರುವ ಮಹತ್ವದ ಯೋಜನೆಗಳಿಂದ ಫಲಾನುಭವಿ




ಗಳು ಹೊರಗುಳಿಯ ಬಾರದೆನ್ನುವುದು ಸರ್ಕಾರದ ಉದ್ದೇಶ. ಲೈಂಗಿಕ ಅಲ್ಪಸಂಖ್ಯಾತರ ಶ್ರೇಯೋಭಿವೃದ್ಧಿಗಾಗಿ ಸರ್ಕಾರ 30 ಸಾವಿರ ರೂ. ಪ್ರೋತ್ಸಾಹ ಧನ ನೀಡುತ್ತಿದೆ. ವೈದ್ಯಕೀಯ, ವಿಮೆ ಸೇರಿ ಅನೇಕ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಆದರೆ, ಅರ್ಜಿ ಸಲ್ಲಿಸುವವರು ಇಲ್ಲದಿರುವುದು ಕಾರ್ಯಕ್ರಮದ ವೈಫಲ್ಯತೆಗೆ ಕಾರಣವಾಗುತ್ತಿದೆ.

**ಸಮೀಕ್ಷೆ ಪ್ರಕ್ರಿಯೆ ಹೇಗೆ**

ಪ್ರತಿ ತಾಲ್ಲೂಕಿಗೆ ಒಬ್ಬ ತೃತೀಯ ಲಿಂಗಿಗೆ ಸಮೀಕ್ಷೆ ಜವಾಬ್ದಾರಿ ನೀಡಿದ್ದು, ಅವರಿಗೆ 45 ದಿನಗಳಿಗೆ ನಿತ್ಯ 400 ರೂ. ಗೌರವಧನ ನೀಡಲಾಗುತ್ತದೆ. ತಾಲ್ಲೂಕು ಆಸ್ಪತ್ರೆ, ತಹಶೀಲ್ದಾರ್ ಕಚೇರಿಗಳಲ್ಲಿ ಕಚೇರಿ ಅವಧಿಯಲ್ಲಿರುತ್ತಾರೆ. ಗಣತಿದಾರರಿಗೆ ನೂತನ ಟ್ಯಾಬ್‌ಗಳನ್ನು ನೀಡಲಾಗಿದೆ. ಜಿಲ್ಲಾದ್ಯಂತ ಕೇವಲ 400 ತೃತೀಯ ಲಿಂಗಿಗಳಿರುವುದರಿಂದ ತಾಲ್ಲೂಕುವಾರು ಮಾಹಿತಿ ಸಮೀಕ್ಷೆದಾರರ ಬಳಿ ಇದ್ದು, ಅವರಿಗೆ ಕರೆ ಮಾಡಿ ಮಾಹಿತಿ ನೀಡುತ್ತಿದ್ದಾರೆ. ಆದರೆ ಬಹುತೇಕರು ಸಮೀಕ್ಷೆಯಿಂದ ದೂರ ಉಳಿಯುವುದಾಗಿಯೇ ಹೇಳುತ್ತಿದ್ದಾರೆಂದು ಅಧಿಕಾರಿಗಳು ಹೇಳಿದ್ದಾರೆ.

> **ಜಿಲ್ಲೆಯಲ್ಲಿ 400 ತೃತೀಯ ಲಿಂಗಿಗಳಿದ್ದು, ಈ ವರೆಗೆ 193 ಜನರು ಸಮೀಕ್ಷೆಗೆ ಒಳಪಟ್ಟಿದ್ದಾರೆ. ಸರ್ಕಾರದ ಸವಲತ್ತುಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕೆಂಬ ಉದ್ದೇಶದಿಂದ ಸರ್ವೆ ನಡೆಸಲಾಗುತ್ತಿದೆ.**
> **-ಪ್ರಿಯಾಂಕ, ಮಹಿಳಾ ಅಭಿವೃದ್ಧಿ ನಿಗಮ ಅಧಿಕಾರಿ.**

**ಕುಟುಂಬದ ಮರ್ಯಾದೆ ಭಯ**

ಹಾಸನದಲ್ಲಿ ತೃತೀಯ ಲಿಂಗಿಗಳ ಸಂಘಟನೆಗಾಗಿಯೇ ಪ್ರಕೃತಿ ಸೇವಾ ಸಂಸ್ಥೆ ಹಾಗು ಸಂಗಮ ಸಂಸ್ಥೆ ಕಾರ್ಯ ನಿರ್ವಹಿಸುತ್ತಿವೆ. ಈ ಎರಡೂ ಸಂಸ್ಥೆಗಳಿಂದ ನೋಂದಣಿ ಆಗಿರುವ ವರ ಸಂಖ್ಯೆಯಷ್ಟೇ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳ ಬಳಿ ಇರುವುದು. ಆದರೆ, ತಾವು ತೃತೀಯ ಲಿಂಗಿಗಳೆಂದು ಬಹಿರಂಗವಾಗಿ ಹೇಳಿಕೊಳ್ಳದೆ ಇರುವವರ ಸಂಖ್ಯೆ ಹೆಚ್ಚಿದೆ. ಎಲ್ಲಿ ತಾವು ಲೈಂಗಿಕ ಅಲ್ಪಸಂಖ್ಯಾತರೆಂದು ಹೇಳಿಕೊಂಡರೆ ಕುಟುಂಬದ ಮರ್ಯಾದೆ ಹಾಳಾಗುತ್ತದೆ ಎಂದು ಅನೇಕರು ತಮ್ಮ ವಿವರವನ್ನು ಬಿಟ್ಟುಕೊಡುತ್ತಿಲ್ಲ. ಅಂತಹವರ ಮನವೊಲಿಕೆಯೂ ಅಧಿಕಾರಿಗಳಿಗೆ ಸಂಕಷ್ಟ ತಂದೊಡ್ಡಿದೆ.

# ಪ್ರತ್ಯೇಕ ಅಪಘಾತ : ಇಬ್ಬರ ಸಾವು

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಶ್ರವಣಬೆಳಗೊಳ ಹಾಗು ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟು, ಮೂವರು ಗಾಯಗೊಂಡಿದ್ದಾರೆ.

ಪ್ಯಾಸೆಂಜರ್ ಆಟೋದಲ್ಲಿ ತೆರಳುತ್ತಿದ್ದ ವ್ಯಕ್ತಿ ಆಯಾತಪ್ಪಿ ಬಿದ್ದು ಮೃತಪಟ್ಟಿರುವ ಘಟನೆ ಶ್ರವಣಬೆಳಗೊಳ-ಕಿಕ್ಕೇರಿ ರಸ್ತೆಯಲ್ಲಿ ನಡೆದಿದೆ. ಚಿಕ್ಕೋನಹಳ್ಳಿ ಗ್ರಾಮದ ಉಮೇಶ್ ಮೃತಪಟ್ಟಿದ್ದಾರೆ. ಹೋಟೆಲ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ಉಮೇಶ್ ಕೆಲಸ ಮುಗಿಸಿ ಸಾಸಲು ಗ್ರಾಮಕ್ಕೆ ಆಟೋದಲ್ಲಿ ಹೋಗುತ್ತಿದ್ದರು. ಚಾಲಕ ವೇಗವಾಗಿ ಗುಂಡಿ ಹತ್ತಿಸಿದ ಪರಿಣಾಮ ಆಯಾತಪ್ಪಿ ಕೆಳಗೆ ಬಿದ್ದು ಮೃತಪಟ್ಟಿದ್ದಾರೆ. ಶ್ರವಣಬೆಳಗೊಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಬೈಕ್‌ಗಳ ಮುಖಾಮುಖಿ ಡಿಕ್ಕಿಯಲ್ಲಿ ವ್ಯಕ್ತಿಯೊಬ್ಬರು ಮೃತಪಟ್ಟು, ಮೂವರು ಗಾಯಗೊಂಡಿರುವ ಘಟನೆ ಮಾರುತಿ ವೃತ್ತದ ಸಮೀಪ ನಡೆದಿದೆ.

ಪೆನ್ಷನ್ ಮೊಹಲ್ಲಾ ನಿವಾಸಿ ವಸೀಂ ಅಹ್ಮದ್ ಮೃತ ಯುವಕ. ಸಂತೆಪೇಟೆಗೆ ಹೋಗಿ ಬರುವುದಾಗಿ ಮನೆಯಲ್ಲಿ ಹೇಳಿ ಸ್ನೇಹಿತ ಮೊಹಮ್ಮದ್ ಅಫ್ರಿದಿ ಜೊತೆಗೆ ಬೈಕ್‌ನಲ್ಲಿ ಹೋಗಿದ್ದ. ಈ ವೇಳೆ ಮಟನ್ ಮಾರ್ಕೆಟ್ ಕಡೆಯಿಂದ ವೇಗವಾಗಿ ಬಂದ ಮತ್ತೊಂದು ಬೈಕ್ ಸವಾರ ಡಿಕ್ಕಿ ಮಾಡಿದ್ದಾನೆ. ಅಪಘಾತದ ರಭಸಕ್ಕೆ ನಾಲ್ವರು ಗಾಯಗೊಂಡು ಬೈಕ್‌ಗಳು ಸಂಪೂರ್ಣ ಜಖಂ ಗೊಂಡಿವೆ. ಹಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ವಸೀಂ ಅಹಮ್ಮದ್ ತಡರಾತ್ರಿ ಮೃತಪಟ್ಟಿದ್ದಾನೆ. ಉಳಿದ ಮೂವರಿಗೆ ಚಿಕಿತ್ಸೆ ಮುಂದುವರಿದಿದೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ರಾಜ್ಯ ಪ್ರಶಸ್ತಿ: ಅರ್ಹರಿಗೆ ಮುಂದಿನ ಬಾರಿ...!

> ನನ್ನ ಪ್ರಕಾರ, ಈ ರೀತಿಯ ರಾಜ್ಯೋತ್ಸವ ಪ್ರಶಸ್ತಿ ಎಂಬುದು ವರ್ಷಕ್ಕೆ ಒಂದು ಬಾರಿ ಮಾತ್ರ ಆಗಬಾರದು. ಇದು ಪ್ರತಿ ತಿಂಗಳೂ ನಡೆಯಬೇಕು. ಪ್ರಶಸ್ತಿಯ ಸಂಖ್ಯೆಯನ್ನು ಎಪ್ಪತ್ತು-ಎಂಬತ್ತಕ್ಕೆ ಸೀಮಿತಗೊಳಿಸಬಾರದು. ಅದನ್ನು ಇನ್ನೂರು, ಮುನ್ನೂರಕ್ಕೆ ಏರಿಸಬೇಕು. ಏಳು ಕೋಟಿ ಜನಸಂಖ್ಯೆ ಇರುವ ನಾಡಿನಲ್ಲಿ ತಿಂಗಳಿಗೆ ಇನ್ನೂರು-ಮುನ್ನೂರು ಸಾಧಕರು ಸಿಗುವುದು, ಅಥವಾ ಅವರನ್ನು ಹುಡುಕುವುದು ಕಷ್ಟವೇನಲ್ಲ. ಅದರಿಂದ ನಮಗೆ ಇನ್ನೂ ಒಂದಷ್ಟು ಜನರ ಹೆಸರು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಅವರ ಕ್ಷೇತ್ರ, ಅವರ ಸಾಧನೆ ತಿಳಿದುಕೊಳ್ಳಲು ಅವಕಾಶ ಸಿಗುತ್ತದೆ. ನಾನೋ, ನನ್ನಂಥ ಅಜ್ಞಾನಿಗಳಿಗೋ ಒಂದಷ್ಟು ಸಾಕ್ಷಾತ್ಕಾರವಾಗುತ್ತದೆ.

ಮತ್ತೊಮ್ಮೆ ರಾಜ್ಯೋತ್ಸವ. ಮತ್ತೊಮ್ಮೆ ಕರ್ನಾಟಕದ ಹಬ್ಬ, ಕನ್ನಡದ ಹಬ್ಬ. ಮತ್ತೊಮ್ಮೆ ಸಡಗರ-ಸಂಭ್ರಮ. ಮತ್ತೊಮ್ಮೆ ರಾಜ್ಯ ಪ್ರಶಸ್ತಿ ಪ್ರಕಟಣೆ. ಮೊತ್ತಮೊದಲನೆಯದಾಗಿ, ಈ ವರ್ಷ ರಾಜ್ಯ ಪ್ರಶಸ್ತಿಯಿಂದ ಪುರಸ್ಕೃತರಾದವರಿಗೂ, ಪ್ರಶಸ್ತಿಗೆ ಭಾಜನರಾದವರಿಗೂ ಅಭಿನಂದನೆಗಳು.

ರಾಜ್ಯ ಪ್ರಶಸ್ತಿ ವಿಜೇತರಿಗೂ, ಪ್ರಶಸ್ತಿ ಪಡೆದುಕೊಂಡವರಿಗೂ ಅಭಿನಂದನೆಗಳು. ಪುರಸ್ಕೃತರಿಗಾದರೆ, ಇದು ಅವರ ಸಾಧನೆಗೆ ಸಂದ ಗೌರವ. ವಿಜೇತರಿಗಾದರೆ ಇದು ಅವರ ಶ್ರಮಕ್ಕೆ ಸಿಕ್ಕ ಫಲ. ಎಲ್ಲಕ್ಕಿಂತ ಹೆಚ್ಚಾಗಿ ಕರ್ನಾಟಕದ ಹುಟ್ಟಿ ಬೆಳೆದರೂ, ಒಮ್ಮೆಯೂ ಹೆಸರು ಕೇಳದ ಕೆಲವು ಘಟಾನುಘಟಿಗಳು, ಮಹಾನ್ ಸಾಧಕರು ನಮ್ಮ ನಡುವೆಯೇ ಇರೆ ಎಂದು ಮೊದಲ ಬಾರಿ ನಮಗೆ ತಿಳಿಸಿಕೊಟ್ಟ ರಾಜ್ಯ ಸರಕಾರಕ್ಕೆ ಮಹದಾಭಿನಂದನೆಗಳು, ನಮಸ್ಕಾರಗಳು.

ಇಂಥದೊಂದು ಪ್ರಶಸ್ತಿಯನ್ನು ಸರಕಾರ ಕೊಡದೇ ಇದ್ದಿದ್ದರೆ, ನಮ್ಮ ನಾಡಿನಲ್ಲಿ ಎಂತೆಂಥವರು ಇದ್ದಾರೆ ಎಂಬುದು ನಾವು ಸಾಯುವವರೆಗೂ ನಮ್ಮ ಗಮನಕ್ಕೆ ಬರುತ್ತಿರಲಿಲ್ಲ. ಆದ್ದರಿಂದ, ಪ್ರತಿವರ್ಷವೂ ನಾವು ಕೇಳದ ಹೆಸರನ್ನು ರಾಜ್ಯ ಪ್ರಶಸ್ತಿಯ ಪಟ್ಟಿಗೆ ಸೇರಿಸಿ, ಅವರ ಬಗ್ಗೆ ನಮಗೆ ತಿಳಿದುಕೊಳ್ಳಲು ಅವಕಾಶ ಮಾಡಿಕೊಟ್ಟ ಎಲ್ಲರೂ ಶ್ಲಾಘನೀಯರು.

ನನ್ನ ಪ್ರಕಾರ, ಈ ರೀತಿಯ ರಾಜ್ಯೋತ್ಸವ ಪ್ರಶಸ್ತಿ ಎಂಬುದು ವರ್ಷಕ್ಕೆ ಒಂದು ಬಾರಿ ಮಾತ್ರ ಆಗಬಾರದು. ಇದು ಪ್ರತಿ ತಿಂಗಳೂ ನಡೆಯಬೇಕು. ಪ್ರಶಸ್ತಿಯ ಸಂಖ್ಯೆಯನ್ನು ಎಪ್ಪತ್ತು-ಎಂಬತ್ತಕ್ಕೆ ಸೀಮಿತಗೊಳಿಸಬಾರದು. ಅದನ್ನು ಇನ್ನೂರು, ಮುನ್ನೂರಕ್ಕೆ ಏರಿಸಬೇಕು. ಏಳು ಕೋಟಿ ಜನಸಂಖ್ಯೆ ಇರುವ ನಾಡಿನಲ್ಲಿ ತಿಂಗಳಿಗೆ ಇನ್ನೂರು-ಮುನ್ನೂರು ಸಾಧಕರು ಸಿಗುವುದು, ಅಥವಾ ಅವರನ್ನು ಹುಡುಕುವುದು ಕಷ್ಟವೇನಲ್ಲ.

ಅದರಿಂದ ನಮಗೆ ಇನ್ನೂ ಒಂದಷ್ಟು ಜನರ ಹೆಸರು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಅವರ ಕ್ಷೇತ್ರ, ಅವರ ಸಾಧನೆ ತಿಳಿದುಕೊಳ್ಳಲು ಅವಕಾಶ ಸಿಗುತ್ತದೆ. ನಾನೋ, ನನ್ನಂಥ ಅಜ್ಞಾನಿಗಳಿಗೋ ಒಂದಷ್ಟು ಸಾಕ್ಷಾತ್ಕಾರವಾಗುತ್ತದೆ. ಈ ನಿಟ್ಟಿನಲ್ಲಿ ರಾಜ್ಯ ಸರಕಾರ ಒಂದಷ್ಟು ಪುಣ್ಯ ಕಟ್ಟಿಕೊಳ್ಳಬೇಕು. ಅಷ್ಟಕ್ಕೂ, ಹಿಂದಿನ ವರ್ಷ ಪ್ರಶಸ್ತಿ ಪಡೆದವರ ಹೆಸರು ಹೇಳಿ ಎಂದರೆ, ಅರವತ್ತೈದೋ-ಎಪ್ಪತ್ತೋ ಜನರ ಪೈಕಿ ಹತ್ತು ಜನರ ಹೆಸರೂ ನೆನಪಿಗೆ ಬರುವುದಿಲ್ಲ.

ಇದುವರೆಗಿನ ಎಲ್ಲ ರಾಜ್ಯಪ್ರಶಸ್ತಿ ವಿಜೇತರ ಹೆಸರು ಹೇಳಿ ಎಂದರೆ ನೂರು ಹೆಸರೂ ಹೇಳಲಾಗುವುದಿಲ್ಲ. ಹಾಗಿರುವಾಗ, ವರ್ಷಕ್ಕೆ ಅರವತ್ತು, ಎಪ್ಪತ್ತು ಎಂಬ ನಿರ್ಬಂಧ ಹೇರದೇ, ಯೋಗ್ಯರು ಎಂದೆನಿಸಿದಲ್ಲಿ ಎಷ್ಟೇ ಜನರಿದ್ದರೂ ಕೊಟ್ಟುಬಿಡಬೇಕು. ಆ ಒಂದು ದಿನದ ಮಟ್ಟಿಗಾದರೂ, ಒಂದಷ್ಟು ಜನರ ಹೆಸರು ಕೆಲವರ ಕಣ್ಣಿಗಾದರೂ ಬೀಳುತ್ತದೆ.

ರಾಜ್ಯ ಪ್ರಶಸ್ತಿ ಪ್ರಕಟವಾಗುವುದಕ್ಕೂ ಮೊದಲು, ಹಲವು ಜನ ವ್ಯಸ್ತರಾಗಿರಬಹುದು, ಕೆಲವು ವಿಭಾಗಗಳು ಕಾರ್ಯತತ್ಪರವಾಗಿರಬಹುದು, ಮಂತ್ರಿಗಳು, ಶಾಸಕರು ಒತ್ತಡದಲ್ಲಿರಬಹುದು. ಆದರೆ, ಪ್ರಶಸ್ತಿ ಪ್ರಕಟವಾದ ದಿನ ಎಲ್ಲರಿಗಿಂತ ಹೆಚ್ಚು ವ್ಯಸ್ತವಾಗಿರುವುದು ಗೂಗಲ್. ಈ ಗೂಗಲ್ ಒಂದು ಇಲ್ಲದಿದ್ದರೆ ಪ್ರಶಸ್ತಿ ಪಡೆದುಕೊಂಡವರ ಮಾಹಿತಿ ಹುಡುಕಲು ನಮಗೆ ಬಹಳ ಕಷ್ಟವಾಗುತ್ತಿತ್ತು.





ಆದ್ದರಿಂದ, ಗೂಗಲ್ ಸಂಸ್ಥೆಗೂ ಧನ್ಯವಾದಗಳು.

ಪ್ರತಿ ತಿಂಗಳೂ ಪ್ರಶಸ್ತಿ ಪ್ರಕಟಿಸಬೇಕು ಎಂದಿದ್ದೇನಲ್ಲ, ಅದಕ್ಕೆ ಗೂಗಲ್ ಸಂಸ್ಥೆಯವರಿಂದಲೇ ಪ್ರಾಯೋಜಕತ್ವವನ್ನು ಪಡೆಯುವ ನಿಟ್ಟಿನಲ್ಲಿಯೋ, ಗೌರವಧನ ಪಡೆಯುವ ದಿಸೆಯಲ್ಲಿಯೋ ಸರಕಾರ ಪ್ರಯತ್ನಿಸಬೇಕು. ಆಗ ಪ್ರಶಸ್ತಿ, ವಿತರಣಾ ಸಮಾರಂಭ, ಇತ್ಯಾದಿಗಳಿಗೆ ತಗಲುವ ವೆಚ್ಚವನ್ನೂ ನಿಭಾಯಿಸಬಹುದು.

ಒಂದು ವೇಳೆ ಅದು ಸಾಧ್ಯವಾಗದಿದ್ದಲ್ಲಿ, ಪ್ರಶಸ್ತಿ ವಿಜೇತರಿಂದಲೇ ಖರ್ಚನ್ನು ಭರಿಸುವಂತೆ ಕೇಳಿಕೊಳ್ಳಬೇಕು. ನಮಗೆ ಪ್ರಶಸ್ತಿಯ ಮೊತ್ತ ಬೇಡ, ಪ್ರಶಸ್ತಿಯೊಂದೇ ಸಾಕು ಎನ್ನುವ ಆಕಾಂಕ್ಷಿಗಳೂ ನಮ್ಮ ನಡುವೆ ಸಾಕಷ್ಟಿದ್ದಾರೆ. ಅಲ್ಲ, ಪ್ರಶಸ್ತಿ ಸಿಗುತ್ತದೆ ಎಂದಾದರೆ ಸ್ವತಃ ಖರ್ಚು ಮಾಡಲು ಸಿದ್ಧವಾಗಿದ್ದವರೂ ಸಿಗಬಹುದು.

ಅದು ಕಷ್ಟ ಎಂದಾದರೆ, ಗೌರವಧನ ನೀಡುವುದನ್ನು ನಿಲ್ಲಿಸಬೇಕು. ಅದರಿಂದ ಯಾವ ವ್ಯತ್ಯಾಸವೂ ಆಗುವುದಿಲ್ಲ. ಮೊದಲೆಲ್ಲ ರಾಜ್ಯಪ್ರಶಸ್ತಿ ವಿಜೇತರಿಗೆ ಮನೆ ಕಟ್ಟಿಕೊಳ್ಳಲು ನಿವೇಶನ ನೀಡುತ್ತಿದ್ದರು. ಈಗ ಅದನ್ನು ನಿಲ್ಲಿಸಿರಲ್ಲ, ಹಾಗೆಯೇ ಗೌರವಧನ ನೀಡುವುದನ್ನೂ ನಿಲ್ಲಿಸಬೇಕು. ಒಂದು ಶಾಲು ಹೊದೆಸಿ, ಹಾರ ಹಾಕಿ, ಹಣ್ಣಿನ ಬುಟ್ಟಿ ಇಟ್ಟು, ಫಲಕ ನೀಡಿ, ಟೋಪಿ ಹಾಕಿ, ಅಲ್ಲ, ಅಲ್ಲ... ಪೇಟ ತೊಡಿಸಿ ಕಳಿಸಿದರೆ ಆಯಿತಪ್ಪ!

ಯಾರು ತಕರಾರು ಮಾಡುತ್ತಾರೆ? ಒಂದು ವೇಳೆ ಮಾಡಿದರೂ, ಎಷ್ಟು ದಿನ ಮಾಡುತ್ತಾರೆ? ಅಷ್ಟಾಗಿಯೂ ಒಂದೊಮ್ಮೆ ಖರ್ಚಿನ ಕುರಿತಾಗಿಯೂ ಅಪಸ್ವರ ಎದ್ದಿತು ಅಂದುಕೊಳ್ಳಿ, ಪ್ರಶಸ್ತಿಗಳನ್ನು ಅಂಚೆಯ ಮುಖಾಂತರ ವಿಜೇತರ ಮನೆಯ ಬಾಗಿಲಿಗೇ ಕಳಿಸಿಕೊಡುವ ವ್ಯವಸ್ಥೆ ಮಾಡಬೇಕು. ಅದರಿಂದ ಅಂಚೆ ಇಲಾಖೆಗೂ ಸಹಾಯವಾಗುತ್ತದೆ. ಅಲ್ಲಿರುವವರಿಗೂ ಕೆಲಸ ಕೊಟ್ಟಂತಾಗುತ್ತದೆ. ಅಂಚೆ ಇಲಾಖೆ ಅಳಿವಿನ ಅಂಚಿನಲ್ಲಿದೆ ಎನ್ನುವವರಿಗೂ ಉತ್ತರ ಕೊಟ್ಟಂತಾಗುತ್ತದೆ.

ಅಷ್ಟೇ ಅಲ್ಲ, ಆಯ್ಕೆ ಸಮಿತಿಯಲ್ಲಿಯೂ ಸಂಖ್ಯೆಯ ಮಿತಿ ಇರಬಾರದು. ಈಗಾಗಲೇ ಪ್ರಶಸ್ತಿ ಪಡೆದವರಿಗೆ ಅಥವಾ ಯಾರಿಗಾದರೂ ಪ್ರಶಸ್ತಿ ಕೊಡಬಾರದು ಎಂದು ಮನಸ್ಸಿದ್ದರೆ ಅಂಥವರನ್ನು ಆಯ್ಕೆ ಸಮಿತಿಗೆ ಸೇರಿಸಬೇಕು. ಆಯ್ಕೆ ಸಮಿತಿಯಲ್ಲಿಯೂ ಸದಸ್ಯರ ಸಂಖ್ಯೆಗೆ ಮಿತಿ ಇರಬಾರದು. ಒಬ್ಬ ಆಕಾಂಕ್ಷಿಗೆ ಒಬ್ಬ ಆಯ್ಕೆ ಸಮಿತಿಯ ಸದಸ್ಯರ ಶಿಫಾರಸಾದರೂ ಇರಬೇಕು.

ಅದರಿಂದ ಆಯ್ಕೆ ಸಮಿತಿಯವರು ಸೂಚಿಸಿದ ಅಥವಾ ಆರಿಸಿದ ಪ್ರತಿಯೊಬ್ಬನಿಗೂ ಪ್ರಶಸ್ತಿ ಲಭಿಸಿದಂತಾಗುತ್ತದೆ. ಆಯ್ಕೆ ಸಮಿತಿಗೆ ರಾಜ್ಯದಲ್ಲಿರುವ ಪ್ರತಿಯೊಂದು ಜಾತಿ, ಧರ್ಮ, ಜನಾಂಗ, ಬುಡ ಕಟ್ಟಿನವರನ್ನು ನೇಮಿಸಬೇಕು. ಇದರಿಂದ ಯಾರೂ ವಂಚಿತರಾಗುವುದಿಲ್ಲ. ಕೆಲಸ, ಸಂಪಾದನೆ ಇಲ್ಲದವರನ್ನು ಆಯ್ಕೆ ಸಮಿತಿಗೆ ಸೇರಿಸಿಕೊಂಡರಂತೂ ಇನ್ನೂ ಉತ್ತಮ. ಈ ನೆಪದದರೂ ಅವರಿಗೆ ಒಂದಷ್ಟು ಧನಸಹಾಯ, ಊಟ-ತಿಂಡಿ, ಭತ್ಯೆ ಇತ್ಯಾದಿಗಳನ್ನು ಸರಕಾರ ಕರುಣಿಸಿದಂತಾಗುತ್ತದೆ.

ಇನ್ನು, ಪ್ರಶಸ್ತಿ ಪಡೆಯಬೇಕಾದರೆ ಕನಿಷ್ಠ ಅರವತ್ತು ವರ್ಷವಾಗಿರಬೇಕು ಎಂಬ ನಿಯಮವನ್ನೂ ತೆಗೆಯಬೇಕು. ಹೇಗಿದ್ದರೂ ಆ ನಿಯಮವನ್ನು ಕಟ್ಟುನಿಟ್ಟಾಗಿ ಯಾವ ಸರಕಾರವೂ ಪಾಲಿಸುತ್ತಿಲ್ಲ ಎಂದಮೇಲೆ ಸುಮ್ಮನೆ ಹೆಸರು ಯಾಕೆ ಕೆಡಿಸಿಕೊಳ್ಳಬೇಕು? ಒಬ್ಬ ವ್ಯಕ್ತಿ ಐವತ್ತೊಂಬತ್ತು ವರ್ಷ ಕೆಲಸ ಮಾಡಿ ಅರವತ್ತು ವರ್ಷವಾಗುವುದರ ಒಳಗೇ ಶಿವನ ಪಾದ ಸೇರಿದರೆ, ಅಂಥವರಿಗೆ ಪ್ರಶಸ್ತಿ ಕೊಡದ ಪಾಪಪ್ರಜ್ಞೆ ಜೀವನಪರ್ಯಂತ ಕಾಡುವುದರಿಂದ ಬಚಾವಾಗಬೇಕು.

ಅಷ್ಟಕ್ಕೂ ಈ ಅರವತ್ತರ ಮಿತಿಯನ್ನು ತಂದದ್ದಾದರೂ ಏಕೆ? ನೌಕರಿಯ ವಿಷಯದ್ದಾದರೆ ಹೌದಪ್ಪ, ನೀವು ಸಲ್ಲಿಸಿದ ಸೇವೆಗೆ ಧನ್ಯವಾದಗಳು, ಇನ್ನು ಮುಂದೆ ನೀವು ವಿಶ್ರಾಂತಿ ತೆಗೆದುಕೊಳ್ಳಿ, ಬೇರೆಯವರಿಗೂ ಅವಕಾಶ ಕೊಡಿ ಎಂದಾದೀತು. ಪ್ರಶಸ್ತಿ ಪಡೆಯುವವರಿಗೂ ಇದು ಲಾಗೂ ಆಗಬೇಕೇ? ಅಂದರೆ ಅವರೂ ಇನ್ನು ಮುಂದೆ ವಿಶ್ರಾಂತಿ ಪಡೆಯಬೇಕು ಎಂಬ ಅರ್ಥವೇ? ಹಾಗಾದರೆ, ಪ್ರಶಸ್ತಿಯಿಂದ ಜವಾಬ್ದಾರಿ ಹೆಚ್ಚುತ್ತದೆ, ಇನ್ನಷ್ಟು ಕೆಲಸ ಮಾಡಲು ಸ್ಫೂರ್ತಿ ಸಿಗುತ್ತದೆ ಎಂಬುದೆಲ್ಲ ಬರೀ ಬೊಗಳೆಯೇ? ಆದ್ದರಿಂದ ವಯೋಮಿತಿಯ ನಿಯಮವನ್ನೂ ತೆಗೆಯಬೇಕು.

ಪ್ರತಿಯೊಬ್ಬ ಮಂತ್ರಿಗೂ, ಶಾಸಕರಿಗೂ, ಮೇಯರ್, ಕಾರ್ಪೊರೇಟರ್, ಪಂಚಾಯ್ತಿ-ಗ್ರಾಮಾಧ್ಯಕ್ಷರಿಗೂ, ಒಬ್ಬರೋ-ಇಬ್ಬರೋ ಎಂಬಂತೆ ಕೋಟಾ ಇಡಬೇಕು. ಮಠದ ಸ್ವಾಮೀಜಿಗಳು, ಚಲನ ಚಿತ್ರರಂಗದ ತಾರೆಯರು ಮೊದಲಾದವರನ್ನು ಈ ಪಟ್ಟಿಗೆ ಸೇರಿಸಿಕೊಳ್ಳಬೇಕು. ಇದರಿಂದ ಪ್ರತಿ ಜಿಗಷ್ಟೇ ಅಲ್ಲ, ವಿಧಾನಸಭೆಯ ಕ್ಷೇತ್ರಕ್ಕಷ್ಟೇ ಅಲ್ಲ, ಪ್ರತಿ ತಾಲೂಕಿಗೂ, ಸಾಧ್ಯವಾದರೆ ಪ್ರತಿ ಮಂಡಳಕ್ಕೂ, ಪಂಚಾಯಿತಿಗೂ, ಗ್ರಾಮಕ್ಕೂ ಅನ್ಯಾಯವಾಗದಂತೆ ನೋಡಿಕೊಳ್ಳಬಹುದು.

ಇದರ ಜತೆಗೆ ಹೈಕಮಾಂಡ್‌ಗೆ ಎಂದು ಒಂದಷ್ಟು, ಪಕ್ಷದ ಅಧ್ಯಕ್ಷರು, ಕಾರ್ಯದರ್ಶಿಗಳು, ಸಾಧ್ಯವಾದರೆ ಅವರ ಕಾರ್ಯದರ್ಶಿಗಳು, ಅವರ ಹೆಂಡತಿ (ಅಥವಾ ಗಂಡ), ಮಕ್ಕಳು, ಇತರೆ ಪ್ರಭಾವಿಗಳಿಗೂ ಒಂದಷ್ಟು ಕೋಟಾ ಇಟ್ಟು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳ ಮೇಲೆ ಇರುವ ಒತ್ತಡವನ್ನು ಕಡಿಮೆಮಾಡಿಕೊಳ್ಳಬೇಕು.

ಊಹೂಂ... ಅಷ್ಟೆಲ್ಲ ಜನರಿಗೆ ಪ್ರಶಸ್ತಿ ಕೊಡಬೇಕೆಂದರೆ ಅಷ್ಟು ಖರ್ಚಾಗುತ್ತದೆ ಅಂದು ಸಬೂಬು ಹೇಳಬಾರದು. ಸರಕಾರ ಖರ್ಚು ಮಾಡಿದಷ್ಟೂ ಮಂತ್ರಿಗಳಿಗೆ ಲಾಭ ಎಂದು ಜನರು ಮಾತನಾಡಿಕೊಳ್ಳುತ್ತಾರೆ ಎಂದು ತಿಳಿಯಬಾರದು. ಮಾತಾಡುವವರು ಮಾತಾಡಿಕೊಳ್ಳಲಿ. ಮಾತಾಡುವವರು ನಿಮ್ಮ ಮನೆಗೆ ರೇಷನ್ ತಂದುಹಾಕುವುದಿಲ್ಲ, ನಿಮ್ಮ ಖರ್ಚು-ವೆಚ್ಚ ನೋಡಿಕೊಳ್ಳುವುದಿಲ್ಲ.

ನಿಮ್ಮ ಕಷ್ಟ ಅವರಿಗೆ ಅರ್ಥವಾಗುವುದಿಲ್ಲ. ಇನ್ನು ಪ್ರಶಸ್ತಿಯ ಆಕಾಂಕ್ಷಿಗಳಿಗೂ ಒಂದಷ್ಟು ನಿಯಮಗಳನ್ನು ಹಾಕಿಕೊಡಬೇಕು. ಆಯ್ಕೆ ಸಮಿತಿಯ ಸದಸ್ಯರು, ಮಂತ್ರಿಗಳು, ಶಾಸಕರು, ಇತ್ಯಾದಿ ಯಾರದರೂ ಒಬ್ಬರ ಕೋಟಾದಲ್ಲಿ ಪ್ರಶಸ್ತಿ ಸಿಗುತ್ತದೆ ಎಂದಾದರೆ ಮಾತ್ರ ಅವರು ತಮ್ಮ ಅರ್ಜಿ ಸಲ್ಲಿಸಬೇಕು.

ಹಾಗೆ ಇಲ್ಲದಿದ್ದಲ್ಲಿ, ಅರ್ಜಿ ಸಲ್ಲಿಸಿ, ಸಮಯ, ಹಣ ಬರ್ಬಾದು ಮಾಡಬಾರದು. ಅರ್ಜಿಯಾದರೂ ಅಷ್ಟೇ, ಅನವಶ್ಯಕ, ಉದ್ದುದ್ದ ಬರೆದು ಕಾಗದ ಹಾಳುಮಾಡಬಾರದು. ಅರ್ಜಿ ಉದ್ದ ಇದ್ದಷ್ಟೂ ಹೆಚ್ಚು ಪರಿಸರ ನಾಶಕ್ಕೆ ಕಾರಣವಾಗುತ್ತದೆ. ಆದ್ದರಿಂದ ಅರ್ಜಿ ಒಂದು ಪುಟಕ್ಕೆ ಮೀಸಲಾಗಿರಬೇಕು. ಎರಡು ಪುಟದ ಅರ್ಜಿಯನ್ನು ಅಲ್ಲಿಯೇ ತಿರಸ್ಕರಿಸಬೇಕು, ಅಮಾನ್ಯ ಮಾಡಬೇಕು. ಒಂದು ಪುಟಕ್ಕಿಂತ ಹೆಚ್ಚಿನ ಅರ್ಜಿ ತಂದವರಿಗೆ ದಂಡ ಹಾಕಬೇಕು. ಆ ಹಣವನ್ನು ಬೇಕಾದರೆ ಶಾಲು, ಹಾರದ ಖರ್ಚಿಗೆ ಅಥವಾ ಅಂಚೆ ಇಲಾಖೆಗೆ ನೀಡುವ ಮೊತ್ತವನ್ನು ಭರಿಸಲು ಬಳಸಿಕೊಳ್ಳಬೇಕು.

ಎರಡು ಪುಟಕ್ಕಿಂತ ಹೆಚ್ಚಿನ ಅರ್ಜಿ ಕೊಟ್ಟವರ ವಿರುದ್ಧ, ಅದನ್ನು ಸ್ವೀಕರಿಸಿದರೆ ಸ್ವೀಕರಿಸಿದವರ ವಿರುದ್ಧ ಪರಿಸರವಾದಿಗಳು ಹೋರಾಟ ಮಾಡಬೇಕು. ಅದರಿಂದ ಖಾಲಿ ಕುಳಿತ ಕೆಲವು ಪರಿಸರ ವಾದಿಗಳಿಗೂ ಕೆಲಸ ಸಿಕ್ಕಂತಾಗುತ್ತದೆ.

ಯಾರ ಬಗ್ಗೆ ಗೊತ್ತಿಲ್ಲವೋ, ಅರ್ಜಿ ಓದಿ ಅವರ ಬಗ್ಗೆ ತಿಳಿದುಕೊಳ್ಳಬೇಕೋ, ಅಂಥವರಿಗೆ ಪ್ರಶಸ್ತಿ ಕೊಡಬಾರದು. ಅದಕ್ಕಿಂತ, ಕಾಲು ಸುತ್ತುವವರಿಗೆ, ಜೈಕಾರ ಹಾಕುವವರಿಗೆ, ಉಘೇ ಎನ್ನುವವರಿಗೆ, ಬೆಣ್ಣೆ ಹೊಸೆಯುವವರಿಗೆ, ಋಣ ತೀರಿಸಬೇಕು ಅಂದುಕೊಂಡವರಿಗೆ, ಪಕ್ಷಕ್ಕಾಗಿ ದುಡಿದವರಿಗೆ, ಚುನಾವಣೆಯಲ್ಲಿ ಸಹಾಯ ಮಾಡಿದವರಿಗೆ ಪ್ರಶಸ್ತಿ ಕೊಡಬೇಕು. ಅದರಿಂದ ಋಣ ಸಂದಾಯವೂ ಆಗುತ್ತದೆ, ಮುಂದಿನ ದಿನಗಳಲ್ಲಿ ಅವರು ಇನ್ನೂ ಹೆಚ್ಚು ಈ ರೀತಿಯ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತಾಗುತ್ತದೆ.

ಅವೆಲ್ಲ ಗ್ಯಾರಂಟಿ ಅಲ್ಲದಿದ್ದರೂ, ಪ್ರಯತ್ನಿಸುವುದರಲ್ಲಿ ಏನೂ ತಪ್ಪಿಲ್ಲ. ಏಕೆಂದರೆ, ಒಂದು ಕಾಲದಲ್ಲಿ ಪರಿಸರ ರಕ್ಷಣೆಗೆ ಹೋರಾಡಿ ಪ್ರಶಸ್ತಿ ಪಡೆದು ಈಗ ಸುಮ್ಮನೆ ಕುಳಿತಿರುವವರು, ಒಮ್ಮೆ ಮಾನವ ಹಕ್ಕಿಗೆ ಹೋರಾಡಿ ಈಗ ತೆಪ್ಪಗೆ ಬಿದ್ದಿರುವವರು, ಜ್ಞಾನಪೀಠದಂಥ ಪ್ರಶಸ್ತಿ ಸಂದ ನಂತರ ಒಂದು ಕಾಳಕ್ಷರ ಬರೆಯದೇ ಕೈಚೆಲ್ಲಿ ಕುಳಿತವರ ಉದಾಹರಣೆಯೂ ನಮ್ಮಲ್ಲಿದೆ.

ಆದ್ದರಿಂದ ಇಂಥ ಅಪವಾದಗಳಿಗೆಲ್ಲ ಕಿವಿ ಕೊಡಬಾರದು. ಹಾಗೆಯೇ, ಮುಂದೆ ಇದರ ಕುರಿತು ಯಾರೂ ತಕರಾರು ಮಾಡದಂತೆ ಇವನ್ನೆಲ್ಲ ಅಧಿಕೃತವಾಗಿಸಬೇಕು. ಇಷ್ಟಾಗಿಯೂ ಪ್ರಶಸ್ತಿ ಪ್ರಕಟವಾದ ನಂತರ ಅದರ ಕುರಿತಾಗಿ ಅಪಸ್ವರ ಎದ್ದರೆ, ತಲೆ ಕೆಡಿಸಿಕೊಳ್ಳಬೇಡಿ, ಅರ್ಹರಿಗೆ ಮುಂದಿನ ಬಾರಿ ಎಂಬ ಮಾತನ್ನು ಹೇಳುತ್ತಿರಬೇಕು.

ಕೊನೆಯದಾಗಿ, ನಾನು ಕಳೆದ ಮೂರು ದಶಕಗಳಿಂದ ಕೊಲ್ಲಿ ರಾಷ್ಟ್ರಗಳಲ್ಲಿದ್ದೇನೆ. ಈ ರಾಷ್ಟ್ರಗಳೆಲ್ಲ ಇನ್ನೂ ಎಷ್ಟು ಹಿಂದಿವೆ ಎಂದೆನಿಸುತ್ತದೆ. ಈ ದೇಶಗಳಲ್ಲ ಇನ್ನೂ ಈ ರೀತಿಯ ಪ್ರಶಸ್ತಿಗಳಿಲ್ಲ. ವರ್ಷಕ್ಕೊಮ್ಮೆ ಒಂದಷ್ಟು ಜನರನ್ನು ಆರಿಸುವುದು, ಅವರನ್ನೆಲ್ಲ ಒಂದು ಸಭಾಂಗಣಕ್ಕೆ ಕರೆದು ತರುವುದು, ಕುರ್ಚಿಯಲ್ಲಿ ಕೂರಿಸುವುದು, ಹಾರತುರಾಯಿ ತೊಡಿಸುವುದು, ಅವರಿಗೆ ಪ್ರೋತ್ಸಾಹಿಸುವುದು, ಉತ್ತೇಜಿಸುವುದು.... ಛೇ, ಇದ್ಯಾವುದೂ ಇಲ್ಲಿ ಇಲ್ಲ.

ಅದಕ್ಕಾಗಿ ಆಯ್ಕೆ ಸಮಿತಿ, ಲಾಬಿ, ವಸೂಲಿ, ಬೆಣ್ಣೆ ಹೊಸೆಯುವಿಕೆ ಏನೂ ಇಲ್ಲ, ಇಲ್ಲ ಸರಕಾರ ಹೇಗೆ ನಡೆಯುತ್ತದೆಯೋ, ಜನ ಹೇಗೆ ಬದುಕುತ್ತಾರೆಯೋ ಆ ದೇವರೇ ಬಲ್ಲ. ಇಲ್ಲೂ ಸೂರ್ಯ ಹುಟ್ಟುತ್ತಾನೆ, ಮುಳುಗುತ್ತಾನೆ. ಇಲ್ಲಿಯೂ ಕಲಾವಿದರಿದ್ದಾರೆ, ಸಾಹಿತಿಗಳಿದ್ದಾರೆ, ಸಾಧಕರಿದ್ದಾರೆ. ಸರಕಾರದ ಪ್ರಶಸ್ತಿಗಳಿಲ್ಲದೆಯೇ ಬದುಕುತ್ತಿರೆ, ಚೆನ್ನಾಗಿಯೇ ಬದುಕುತ್ತಿದ್ದಾರೆ.

ಇಲ್ಲಿಯ ಸರಕಾರಗಳೂ ಅಷ್ಟೇ, ರಾಷ್ಟ್ರೀಯ ದಿವಸದಂದು ಪ್ರಶಸ್ತಿ ನೀಡುವ ಪದ್ಧತಿ ಇಟ್ಟು ಕೊಳ್ಳಲಿಲ್ಲ. ಆದರೂ ದೇಶ ಮುಂದೆ ಸಾಗುತ್ತಿದೆ. ಚೆನ್ನಾಗಿಯೇ ಮುಂದೆ ಸಾಗುತ್ತಿದೆ.

**- ಕಿರಣ್ ಉಪಾಧ್ಯಾಯ,** ಬಹ್ರೈನ್

## 04-11-2025 ದಿನ ಭವಿಷ್ಯ

**ಮೇಷ:** ಆರೋಗ್ಯದ ಬಗ್ಗೆ ಸ್ವಲ್ಪ ಗಮನ ನೀಡಬೇಕು. ಯಾವುದೇ ಅನುಭವದ ವ್ಯಕ್ತಿಯ ಸಲಹೆ ಇಲ್ಲದೆ, ನಿಮಗೆ ಆರ್ಥಿಕ ನಷ್ಟವಾಗುವ ಯಾವುದೇ ಕೆಲಸವನ್ನು ಮಾಡಬೇಡಿ. ಒಂದು ಅಂಚೆಯ ಮೂಲಕ ಬಂದ ಪತ್ರ ಇಡೀ ಕುಟುಂಬಕ್ಕೆ ಸಂತೋಷದ ಸುದ್ದಿ ತರುತ್ತದೆ. ಮನ್ಮಥನ ಬಾಣದಿಂದ ತಪ್ಪಿಸಿಕೊಳ್ಳುವ ಅವಕಾಶ ಕಡಿಮೆಯಿದೆ.

**ವೃಷಭ:** ನಿಮ್ಮ ಆರೋಗ್ಯದ ಬಗ್ಗೆ ಚಿಂತಿಸುವುದು ನಿಮ್ಮ ಕಾಯಿಲೆಯನ್ನು ಇನ್ನಷ್ಟು ಉಲ್ಬಣಿಸಬಹುದಾದ್ದರಿಂದ ಹಾಗೆ ಮಾಡಬೇಡಿ. ಹೊಸ ಹಣಗಳಿಕೆಯ ಅವಕಾಶಗಳು ಲಾಭದಾಯಕವಾಗಿರುತ್ತವೆ. ಸಂಬಂಧಗಳೊಂದಿಗಿನ ಸಂಬಂಧಗಳು ಹಾಗೂ ಬಂಧಗಳ ನವೀಕರಣದ ಒಂದು ದಿನ. ಪ್ರೀತಿಪಾತ್ರರು ಪ್ರಣಯದ ಮೂಡ್ ನಲ್ಲಿರುತ್ತಾರೆ.

**ಮಿಥುನ:** ಕುಟುಂಬದ ವೈದ್ಯಕೀಯ ವೆಚ್ಚದಲ್ಲಿ ಹೆಚ್ಚಳವನ್ನು ತಳ್ಳಿ ಹಾಕಲು ಸಾಧ್ಯವಿಲ್ಲ. ನೀವು ನಿಮ್ಮ ತಂತ್ರಗಳನ್ನು ಅಳವಡಿಸಿದಲ್ಲಿ ಇಂದು ಸ್ವಲ್ಪ ಹೆಚ್ಚುವರಿ ಹಣ ಸಂಪಾದಿಸುತ್ತೀರಿ. ಇಂದು ನೀವು ಇತರರ ಅಗತ್ಯಗಳಿಗೆ ಗಮನ ನೀಡಬೇಕಾದರೂ ಮಕ್ಕಳೊಂದಿಗೆ ಅತೀ ಉದಾರತೆ ತೋರಿಸುವುದು ತೊಂದರೆಗೆ ಕಾರಣವಾಗುತ್ತದೆ. ಈ ದಿನ ನಿಮಗೆ ಗುಲಾಬಿಗಳ ಸುಗಂಧವನ್ನು ತರುತ್ತದೆ.

**ಕರ್ಕಾಟಕ:** ನಿಮ್ಮ ಹಠಮಾರಿ ಧೋರಣೆ ಕೇವಲ ಸಮಯ ವ್ಯರ್ಥವಾದದ್ದರಿಂದ ಅದನ್ನು ನಿಮ್ಮ ಸಂತೋಷದ ಜೀವನದ ಸಲುವಾಗಿ ತೊರೆದುಬಿಡಿ. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ. ಅದರೆ ಹಾಗೆ ಮಾಡಿದಲ್ಲಿ ನೀವು ವಿಷಾದಿಸುತ್ತೀರಿ. ನಿಮ್ಮ ವಿವಾಹಿತ ಜೀವನ ಎಂದಿಗೂ ಹೆಚ್ಚು ವರ್ಣರಂಜಿತವಾಗಿರಲಿಲ್ಲ.

**ಸಿಂಹ:** ಗಾಳಿಯಲ್ಲಿ ಮನೆ ಕಟ್ಟುವಲ್ಲಿ ನಿಮ್ಮ ಸಮಯ ವ್ಯರ್ಥ ಮಾಡಬೇಡಿ. ಬದಲಿಗೆ ಏನಾದರೂ ಅರ್ಥಪೂರ್ಣವಾದದ್ದನ್ನು ಮಾಡಲು ನಿಮ್ಮ ಶಕ್ತಿ ವ್ಯಯಿಸಿ. ಆರ್ಥಿಕವಾಗಿ ಇಂದು ನೀವು ಸಾಕಷ್ಟು ಬಲವಾಗಿ ಕಾಣುವಿರಿ, ಗ್ರಹ ಮತ್ತು ನಕ್ಷತ್ರಗಳ ಚಲನೆಯಿಂದ ಇಂದು ನಿಮಗಾಗಿ ಹಣವನ್ನು ಸಂಪಾದಿಸುವ ಅನೇಕ ಅವಕಾಶಗಳು ಉಂಟಾಗುತ್ತವೆ.

**ಕನ್ಯಾ:** ನಿಮ್ಮ ಶೀಘ್ರ ಕ್ರಮ ನಿಮ್ಮನ್ನು ಪ್ರೇರೇಪಿಸುತ್ತದೆ. ಯಶಸ್ಸು ಸಾಧಿಸಲು-ಸಮಯದ ಜೊತೆ ನಿಮ್ಮ ಆಲೋಚನೆಗಳನ್ನು ಬದಲಾಯಿಸಿಕೊಳ್ಳಿ-ಇದು ನಿಮ್ಮ ದೃಷ್ಟಿಯನ್ನು ವಿಸ್ತಾರಗೊಳಿಸುತ್ತದೆ ನಿಮ್ಮ ವ್ಯಕ್ತಿತ್ವವನ್ನು ವೃದ್ಧಿಸುತ್ತದೆ- ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸುತ್ತದೆ ಮತ್ತು ನಿಮ್ಮ ಮನಸ್ಸನ್ನು ಪಕ್ವಗೊಳಿಸುತ್ತದೆ.

**ತುಲಾ:** ನಿಮ್ಮ ಕೆಟ್ಟ ಚಟಗಳು ನಿಮ್ಮನ್ನು ನಾಶಗೊಳಿಸುತ್ತವೆ. ಇಂದು ವ್ಯಾಪಾರದಲ್ಲಿ ಉತ್ತಮ ಲಾಭವನ್ನು ಗಳಿಸುವ ಸಾಧ್ಯತೆ ಇದೆ. ಇಂದಿನ ದಿನ ನೀವು ನಿಮ್ಮ ವ್ಯಾಪಾರಕ್ಕೆ ಹೊಸ ಎತ್ತರವನ್ನು ನೀಡಬಹುದು. ಬಿಕ್ಕಟ್ಟಿನ ಸಮಯದಲ್ಲಿ ನಿಮಗೆ ಸಹಾಯ ಮಾಡಿದ ಸಂಬಂಧಿಗಳಿಗೆ ನಿಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿ.

**ವೃಶ್ಚಿಕ:** ನಿರಾಶಾದಾಯಕ ಮನೋಭಾವವು ಕೇವಲ ನಿಮ್ಮ ಅವಕಾಶಗಳನ್ನು ಸೀಮಿತಗೊಳಿಸುವುದಷ್ಟೇ ಅಲ್ಲದೇ ದೇಹದ ಸಾಮರಸ್ಯವನ್ನೂ ಭಂಗಪಡಿಸುವುದರಿಂದ ಅವುಗಳನ್ನು ತಡೆಯಬೇಕು. ಯಾರ ಹತ್ತಿರವಾದರು ಸಾಲವನ್ನು ತೆಗೆದುಕೊಂಡಿರುವ ಜನರು, ಇಂದು ಯಾವುದೇ ಪರಿಸ್ಥಿತಿಯಲ್ಲೂ ಸಾಲವನ್ನು ಮರುಪಾವತಿಸಬೇಕಾಗುತ್ತದೆ, ಇದರಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪ ದುರ್ಬಲವಾಗುತ್ತದೆ.

**ಧನು:** ಇಂದು ನೀವು ನಿಮ್ಮ ಆರೋಗ್ಯ ಮತ್ತು ನೋಟವನ್ನು ಸುಧಾರಿಸಲು ಕೆಲಸ ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ. ಈ ಹಣ ನಿಮ್ಮ ಅನೇಕ ಸಮಸೆಗಳನ್ನು ದೂರ ಮಾಡಬಹುದು. ಈ ರಾಶಿಚಕ್ರದ ವ್ಯಾಪಾರಿಗಳಿಗೆ ಯಾವುದೇ ಹಳೆಯ ಹೂಡಿಕೆಯ ಕಾರಣದಿಂದಾಗಿ ನಷ್ಟವಾಗುವ ಸಾಧ್ಯತೆ ಇದೆ.

**ಮಕರ:** ಜೀವನದಲ್ಲಿ ಒತ್ತಡದ ಮನೋಭಾವವನ್ನು ತಪ್ಪಿಸಿ ಇಂದು ಮಾಡಿದ ಹೂಡಿಕೆ ನಿಮ್ಮ ಅಭ್ಯುದಯ ಮತ್ತು ಆರ್ಥಿಕ ಭದ್ರತೆಯನ್ನು ಹೆಚ್ಚಿಸುತ್ತದೆ. ಅತಿಥಿಗಳು ನಿಮ್ಮ ಮನೆಯನ್ನು ಒಂದು ಆಹ್ಲಾದಕರ ಮತ್ತು ಅದ್ಭುತ ಸಂಜೆಗಾಗಿ ಬಳಸಿಕೊಳ್ಳುತ್ತಾರೆ. ಪ್ರೀತಿಯಲ್ಲಿ ಬೀಳುವುದು ಇಂದು ನಿಮಗೆ ಕೆಟ್ಟದಾಗಿರಬಹುದಾದ್ದರಿಂದ ನೀವು ಜಾಗರೂಕರಾಗಿರಿ.

**ಕುಂಭ:** ಪತ್ನಿ ನೀವು ಹುರಿದುಂಬಿಸಬಹುದು. ನಿಮ್ಮ ತಂದೆಯ ಯಾವುದೇ ಸಲಹೆ ಇಂದು ಕೆಲಸದ ಸ್ಥಳದಲ್ಲಿ ಇಂದು ನಿಮಗೆ ಹಣದ ಪ್ರಯೋಜನವನ್ನು ನೀಡುತ್ತದೆ. ನಿಮ್ಮ ಸಂಗಾತಿಯ ಸಂಗದಲ್ಲಿ-ಆರಾಮ ಮತ್ತು ಪ್ರೀತಿಯನ್ನು ಪಡೆಯಿರಿ. ನೀವು ಮೊದಲ ನೋಟದಲ್ಲೇ ಪ್ರೀತಿಯಲ್ಲಿ ಬೀಳಬಹುದು. ಚಿಲ್ಲರೆ ಮತ್ತು ಸಗಟು ವ್ಯಾಪಾರಿಗಳಿಗೆ ಒಳ್ಳೆಯ ದಿನ.

**ಮೀನ:** ನಿಮ್ಮ ಸ್ನೇಹಿತರು ಅಥವಾ ಕುಟುಂಬ ಸದಸ್ಯರೊಂದಿಗಿನ ಸಂತಸದ ಪ್ರಯಾಣ ನಿಮಗೆ ಸಮಾಧಾನ ನೀಡುತ್ತದೆ. ಸಹೋದರ-ಸಹೋದರಿಯರ ಸಹಾಯದಿಂದ ಇಂದು ನೀವು ಆರ್ಥಿಕವಾಗಿ ಲಾಭವನ್ನು ಪಡೆಯಬಹುದು. ನಿಮ್ಮ ಸಹೋದರ ಸಹೋದರಿಯರ ಸಲಹೆ ತೆಗೆದುಕೊಳ್ಳಿ ಮನೆಯಲ್ಲಿನ ಹಬ್ಬದ ವಾತಾವರಣ ನಿಮ್ಮ ಉದ್ವೇಗವನ್ನು ಶಮನಗೊಳಿಸುತ್ತದೆ.

# ಕ್ರೈಸ್ತ ಧರ್ಮ ಪ್ರಚಾರಕ್ಕೆ ಬಂದವ ಕನ್ನಡ ಕಿಂಕರನಾದ

**» ಮತ ಪ್ರಚಾರಕ್ಕೆ ಬೇಕಾಗುವಷ್ಟು/ಸಾಕಾಗುವಷ್ಟು ಕನ್ನಡವನ್ನು ಅವರು ಕಲಿತಿದ್ದರೆ ಸಾಕಾಗಿತ್ತೇನೋ? ಆದರೆ ಕನ್ನಡದ ಸೊಗಡು ಅವರನ್ನು ಇನ್ನಿಲ್ಲದಂತೆ ಸೆಳೆದುಬಿಟ್ಟಿತು. ಹೀಗಾಗಿ ವ್ಯಾವಹಾರಿಕ/ಧಾರ್ಮಿಕ ಅಗತ್ಯವನ್ನೂ ಮೀರಿ, ಕರ್ನಾಟಕದ ಕಲೆ-ಸಂಸ್ಕೃತಿ-ಪರಂಪರೆಗಳ ಅಧ್ಯಯನಕ್ಕೆ ಇಳಿದು ಅನನ್ಯ ಜ್ಞಾನಭಂಡಾರವನ್ನು ತಮ್ಮದಾಗಿಸಿಕೊಂಡರು, ಕನ್ನಡಿಗರೇ ಆಗಿಬಿಟ್ಟರು ಮೋಗ್ಲಿಂಗ್.**



ಕನ್ನಡಕ್ಕಾಗಿ ದುಡಿದ ವಿದೇಶಿ ಚೇತನ

ಅನ್ನಪೂರ್ಣ ಎಂಬ ಕನ್ನಡ ಚಲನಚಿತ್ರದಲ್ಲಿ ಡಾ.ಪಿ.ಬಿ.ಶ್ರೀನಿವಾಸ್ ಅವರು ಹಾಡಿರುವ ಕನ್ನಡವೇ ತಾಯ್ನುಡಿಯು, ಕರುನಾಡು ತಾಯ್ನಾಡು, ಕನ್ನಡಿಗನು ನೀನೆಂಬ ಅಭಿಮಾನವಿರಲಿ ಎಂಬ ಹಾಡನ್ನು ಕೇಳಿ ಆನಂದಿಸದ ಕನ್ನಡಿಗರಿಲ್ಲ. ಕನ್ನಡನಾಡಿನ ಸಂಸ್ಕೃತಿ-ಪರಂಪರೆಗಳನ್ನು ಕೆಲವೇ ಸಾಲುಗಳಲ್ಲಿ ಕಟ್ಟಿ ಕೊಟ್ಟಿರುವ ಚಿ.ಉದಯಶಂಕರರ ಗೀತೆಯಿದು. ಕರುನಾಡಿನ ಇಂಥ ಭವ್ಯ ಇತಿಹಾಸಕ್ಕೆ ಅನನ್ಯ ಕೊಡುಗೆ ನೀಡಿದ ಮತ್ತು ಸಾಹಿತ್ಯ-ಸಂಗೀತ-ಶಿಲ್ಪಕಲೆ ಮುಂತಾದ ಕ್ಷೇತ್ರಗಳಿಗೆ ಸೇರಿದ ಗಣನೀಯ ಸಂಖ್ಯೆಯ ಕನ್ನಡಿಗರು ನಮ್ಮಲ್ಲಿ ಆಗಿ ಹೋಗಿದ್ದಾರೆ. ಆದರೆ, ಮೇಲೆ ಉಲ್ಲೇಖಿಸಿರುವ ಹಾಡಿನಲ್ಲಿರುವಂತೆ ಕನ್ನಡವು ತಾಯ್ನುಡಿಯಾಗಿಲ್ಲದ, ಕರುನಾಡು ತಾಯ್ನಾಡಾಗಿಲ್ಲದ, ಮೂಲತಃ ಕನ್ನಡಿಗರೂ ಆಗಿಲ್ಲದ ಸಾಕಷ್ಟು ವಿದೇಶಿ ಚೇತನಗಳು ಕೂಡ ಕನ್ನಡಕ್ಕಾಗಿ ದುಡಿದಿವೆ ಎಂಬುದು ಹೆಮ್ಮೆಯ ಸಂಗತಿ. ಅಂಥ ಒಂದು ಅನರ್ಘ್ಯ ರತ್ನದ ಕುರಿತಾದ ಪಕ್ಷಿನೋಟ ಇದು.

ಮಂಗಳೂರು ಸಮಾಚಾರ ಬಿತ್ತರಿಸಿದವರು: ಭಾರತದಲ್ಲಿ ಮೂಲಸೌಕರ್ಯಗಳ ಕೊರತೆಯು ಬೃಹದಾಕಾರದಲ್ಲಿ ತಾಂಡವವಾಡುತ್ತಿದ್ದಾಗ, ಮಾಹಿತಿ ಪ್ರಸರಣವು ಸವಾಲಿನ ಸಂಗತಿಯೇ ಆಗಿತ್ತು. ಇಷ್ಟಾಗಿಯೂ 1782ರ ಮಾರ್ಚ್ 30ರಂದು ದಿ ಬೆಂಗಾಲಿ ಗೆಜೆಟ್ ಎಂಬ ಇಂಗ್ಲಿಷ್ ದಿನಪತ್ರಿಕೆಯು ಕಲ್ಕತ್ತದಲ್ಲಿ ಶುರುವಾಯಿತು. ಇದನ್ನು ಮೇಲ್ಪಂಕ್ತಿಯಾಗಿ ಇಟ್ಟುಕೊಂಡು ಎಂಬಂತೆ, ಕರ್ನಾಟಕದ ಮಂಗಳೂರಿನಲ್ಲಿ ಮಂಗಳೂರು ಸಮಾಚಾರ ಹೆಸರಿನ ಕನ್ನಡದ ಮೊಟ್ಟಮೊದಲ ಪತ್ರಿಕೆ ಶುರುವಾಯಿತು. ಆದರೆ ಇದರ ಹಿನ್ನೆಲೆ ನಿಜಕ್ಕೂ ಬೆರಗು ಹುಟ್ಟಿಸುವಂಥದ್ದು; ಕಾರಣ, ಇದಕ್ಕೆ ಜನ್ಮವಿತ್ತವರು ಓರ್ವ ವಿದೇಶಿ ಪ್ರಜೆ. ಅವರೇ ಹರ್ಮನ್ ಮೋಗ್ಲಿಂಗ್!

ಮೂಲತಃ ಜರ್ಮನಿ ದೇಶದವರಾದ ಹರ್ಮನ್ ಮೋಗ್ಲಿಂಗ್, ಕ್ರೈಸ್ತ ಧರ್ಮದ ಪ್ರಚಾರದ ಉದ್ದೇಶಕ್ಕಾಗಿ ಭಾರತಕ್ಕೆ ಆಗಮಿಸಿ ಮಂಗಳೂರಿನಲ್ಲಿ ನೆಲೆಯಾಗಿದ್ದರು. ಧರ್ಮ ಪ್ರಚಾರಕ್ಕೆ ಸಂವಹನ ಸಾಮರ್ಥ್ಯ ಬಹಳ ಮುಖ್ಯ; ಆದರೆ ಪರದೇಶ-ಪರಭಾಷೆಯ ಈ ವ್ಯಕ್ತಿ ಈ ನಿಟ್ಟಿನಲ್ಲೇ ಸವಾಲು ಎದುರಿಸಬೇಕಾಗಿ ಬಂತು. ಹಾಗಂತ ಸೋಲೊಪ್ಪದ, ಹಿಡಿದ ಪಟ್ಟು ಸಡಿಲಿಸದ ಮೋಗ್ಲಿಂಗ್, ದಿನಗಳೆದಂತೆ ಕನ್ನಡವನ್ನು ಮೈಗೂಡಿಸಿಕೊಳ್ಳಲು ಶುರು ಮಾಡಿದರು.

ಮತ ಪ್ರಚಾರಕ್ಕೆ ಬೇಕಾಗುವಷ್ಟು/ಸಾಕಾಗುವಷ್ಟು ಕನ್ನಡವನ್ನು ಅವರು ಕಲಿತಿದ್ದರೆ ಸಾಕಾಗಿತ್ತೇನೋ? ಆದರೆ ಕನ್ನಡದ ಸೊಗಡು ಅವರನ್ನು ಇನ್ನಿಲ್ಲದಂತೆ ಸೆಳೆದುಬಿಟ್ಟಿತು. ಹೀಗಾಗಿ ವ್ಯಾವಹಾರಿಕ/ಧಾರ್ಮಿಕ ಅಗತ್ಯವನ್ನೂ ಮೀರಿ, ಕರ್ನಾಟಕದ ಕಲೆ-ಸಂಸ್ಕೃತಿ-ಪರಂಪರೆಗಳ ಅಧ್ಯಯನಕ್ಕೆ ಇಳಿದು ಅನನ್ಯ ಜ್ಞಾನಭಂಡಾರವನ್ನು ತಮ್ಮದಾಗಿಸಿಕೊಂಡರು, ಕನ್ನಡಿಗರೇ ಆಗಿಬಿಟ್ಟರು ಮೋಗ್ಲಿಂಗ್.

ಕನ್ನಡ ತಪವನ್ನು ಅಷ್ಟಕ್ಕೇ ನಿಲ್ಲಿಸದೆ ಕನ್ನಡದ ಜನಮಾನಸದಲ್ಲಿ ಮತ್ತು ಅನುಭವದಲ್ಲಿ ಕೆನೆಗಟ್ಟಿರುವ ಗಾದೆಗಳನ್ನು ಸಂಗ್ರಹಿಸಲು ಅಖಾಡಕ್ಕೆ ಇಳಿದರು. ಇದೂ ಸಾಲದೆಂಬಂತೆ ಕನ್ನಡದಲ್ಲಿ ಸಾಕಷ್ಟು ಕೃತಿಗಳನ್ನು ರಚಿಸಿದರು. ನಿಮ್ಮೊಡನಿದ್ದೂ ನಾನು ನಿಮ್ಮಂತೆ ಆಗಲಿಲ್ಲ ಎಂದು ಅಸಹಾಯಕತೆಯಲ್ಲಿ ಕೈಚೆಲ್ಲುವವರ ಮಧ್ಯೆ ವಿಭಿನ್ನರಾಗಿ ನಿಂತರು ಹರ್ಮನ್ ಮೋಗ್ಲಿಂಗ್!

ಸಾಕಾರಗೊಂಡ ಕನಸು: ನಿರಂತರ ಅಧ್ಯಯನದ ಮೂಲಕ ದಕ್ಕಿಸಿಕೊಂಡ ಕನ್ನಡ ಜ್ಞಾನಗಂಗೆಯನ್ನು, ತಮಗೆ ಆಶ್ರಯವಿತ್ತ ಕನ್ನಡಿಗರಿಗೂ ವಿಭಿನ್ನ ರೀತಿಯಲ್ಲಿ ಹಂಚುವಂತಾಗಬೇಕು ಎಂದು ಕನಸು ಕಂಡರು ಮೋಗ್ಲಿಂಗ್. ಈ ತುಡಿತ ತೀವ್ರವಾಗುತ್ತಾ ಹೋದಂತೆ ಸ್ಪಷ್ಟ ರೂಪವನ್ನೂ ತಳೆಯತೊಡಗಿತು. ಆಗ ಹುಟ್ಟಿಕೊಂಡಿದ್ದೇ ಮಂಗಳೂರು ಸಮಾಚಾರ ಎಂಬ ಕನ್ನಡದ ಮೊಟ್ಟಮೊದಲ ದಿನಪತ್ರಿಕೆ. 1843ರ ಜುಲೈ 1ರಂದು ಪ್ರಕಟಗೊಂಡ ಈ ನಾಲ್ಕು ಪುಟಗಳ ಪತ್ರಿಕೆಯು, ಮೋಗ್ಲಿಂಗ್ ಅವರು ಅದುವರೆಗೂ ಮಾಡಿದ್ದ ತಪಸ್ಸಿನ ಫಲಶ್ರುತಿಯಾಗಿತ್ತು.

ಮುದ್ರಣವೆಂಬ ಪ್ರಸವ ವೇದನೆ: ಈಗ ಬಿಡಿ, ಛಾಯಾಕ್ಷರ ಜೋಡಣೆ (ಫೋಟೋಟೈಪ್ ಸೆಟಿಂಗ್) ಸೇರಿದಂತೆ ಮುದ್ರಣ ಮಾಧ್ಯಮದಲ್ಲಿ ಸಾಕಷ್ಟು ಕ್ರಾಂತಿಗಳಾಗಿವೆ. ಪುಟ ವಿನ್ಯಾಸವೆಂಬುದು ಸೃಜನಶೀಲತೆಗೆ ಹಿಡಿದ ಕೈಗನ್ನಡಿಯೇ ಆಗಿ ಬಿಟ್ಟಿದೆ. ಚಿತ್ತಾಕರ್ಷಕ ವಿನ್ಯಾಸವಿರುವ ವರ್ಣರಂಜಿತ ಪತ್ರಿಕೆಗಳು ಮತ್ತು ನಿಯತಕಾಲಿಕಗಳು ಮಾರುಕಟ್ಟೆಯ ಮಳಿಗೆಗಳಲ್ಲಿ ತೂಗಾಡುವುದು ವಾಡಿಕೆಯಾಗಿದೆ. ಆದರೆ ಮೋಗ್ಲಿಂಗ್ ಅವರ ಕಾಲಘಟ್ಟದಲ್ಲಿ ಇಂಥ ತಂತ್ರಜ್ಞಾನದ ಒತ್ತಾಸೆ ಇರಲಿಲ್ಲ, ಕಲ್ಲಚ್ಚುಗಳಿಂದ ಪತ್ರಿಕೆಯನ್ನು ಮುದ್ರಿಸಬೇಕಾಗುತ್ತಿತ್ತು. ತಮ್ಮದೇ ಬಾಸೆಲ್ ಮಿಷನ್ ಮುದ್ರಣಾಲಯಕ್ಕೆ ಈ ಹೊಣೆ ಹೊರಿಸಿ ಮಂಗಳೂರು ಸಮಾಚಾರವನ್ನು ಮುದ್ರಿಸುತ್ತಿದ್ದ ಮೋಗ್ಲಿಂಗ್ ಅದಕ್ಕೆ 1 ಕಾಸು ಬೆಲೆಯನ್ನು ನಿಗದಿಪಡಿಸಿದ್ದರು.


ಪತ್ರಿಕೆಯ ಪ್ರಸವವೇನೋ ಆಗುತ್ತಿತ್ತು, ಆದರೆ ಅದರ ಮಾರಾಟವೂ ಆಗಬೇಕಲ್ಲ?! ಸರಿ, ಅದಕ್ಕೂ ಟೊಂಕ ಕಟ್ಟಿದ ಮೋಗ್ಲಿಂಗ್ ಸ್ವತಃ ಕಾಲ್ನಡಿಗೆಯಲ್ಲೇ ಮನೆಮನೆಗೂ ತೆರಳಿ ಮಂಗಳೂರು ಸಮಾಚಾರವನ್ನು ಓದುಗರಿಗೆ ಬಿತ್ತರಿಸಲು ಶುರುಮಾಡಿದರು. ಇಂಥ ನಿಸ್ವಾರ್ಥ ಪ್ರೀತಿಯು ಅವರಲ್ಲಿ ಮೊಳೆಯಲು ಕಾರಣ, ಕನ್ನಡ ಎಂಬ ಮೂರಕ್ಷರ ಹಾಗೂ ಅದು ಏಕಪ್ರಕಾರವಾಗಿ ಬೀರುತ್ತಿದ್ದ ಕಸ್ತೂರಿ ಪರಿಮಳ. ಮೋಗ್ಲಿಂಗ್ ಅವರು ಅಂದು ಹೀಗೆ ಬೆವರು-ರಕ್ತವನ್ನು ಬಸಿದು ವಿನಿಯೋಗಿಸಿದ ಶ್ರಮವು ಕನ್ನಡದ ಪತ್ರಿಕಾರಂಗಕ್ಕೆ ಒಂದು ಭದ್ರವಾದ ತಳಹದಿಯನ್ನು ನೀಡಿತೆನ್ನ ಬೇಕು. ಹೀಗಾಗಿ, ರಾಜ್ಯದಲ್ಲಿ ಪ್ರತಿ ವರ್ಷವೂ ಜುಲೈ 1ರಂದು ಕನ್ನಡ ಪತ್ರಿಕಾ ದಿನವನ್ನು ಆಚರಿಸಲಾಗುತ್ತದೆ.

ವೈವಿಧ್ಯಮಯ ಮಾಹಿತಿಯ ಆಗರ: ಪತ್ರಿಕೆ ಎಂದಾಕ್ಷಣ ಕೇವಲ ಸುದ್ದಿಯನ್ನೇ ನೀಡಿದರೆ ಅದೊಂದು ಶುಷ್ಕ ಪ್ರಸ್ತುತಿ ಆಗಿಬಿಡುತ್ತದೆ ಎಂದು ಗ್ರಹಿಸಿದ್ದ ಮೋಗ್ಲಿಂಗ್, ಊರ ವರ್ತಮಾನ, ಸರ್ವರಾಜ್ಯ ವರ್ತಮಾನ, ಆಶ್ಚರ್ಯದ ಸುದ್ದಿ ಮುಂತಾದ ವಿವಿಧ ಸ್ಥಿರ ಶೀರ್ಷಿಕೆಗಳ ಅಡಿಯಲ್ಲಿ ರಸವತ್ತಾದ ಸಂಗತಿಗಳನ್ನು ಹಂಚಿ ಕೊಳ್ಳುತ್ತಿದ್ದರು. ಅಂದಿನ ಬ್ರಿಟಿಷ್ ಸರಕಾರ ಕಾಲಾನುಕಾಲಕ್ಕೆ ತರುತ್ತಿದ್ದ ಕಾನೂನುಗಳು, ಭಾರತೀಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವ ಪುರಾಣೇತಿಹಾಸದ ಮತ್ತು ಸಾಮಾಜಿಕ ಕಥೆಗಳು ಹೀಗೆ ವಿಷಯ ವೈವಿಧ್ಯಕ್ಕೆ ಒತ್ತು ನೀಡುತ್ತಿದ್ದರು. ಸ್ವತಃ ಒಬ್ಬ ಕ್ರೈಸ್ತ ಮಿಷನರಿ ಆಗಿದ್ದರೂ ಮತ ಪ್ರಚಾರಕ್ಕೆ ಸಂಬಂಧಿಸಿದ ವಿಷಯಗಳ ಅಥವಾ ಯೇಸುಕ್ರಿಸ್ತರ ಬೋಧನೆಗಳ ಬದಲಿಗೆ, ಪುರಂದರ ದಾಸರ ಗೀತೆಗಳನ್ನು ಪ್ರಕಟಿಸುತ್ತಿದ್ದರು ಮೋಗ್ಲಿಂಗ್. ಕನ್ನಡದ ಸಾಹಿತ್ಯ-ಸಂಸ್ಕೃತಿಗಳ ಮೇಲೆ ಅವರಿಗೆ ಇದ್ದ ಒಲವನ್ನು ಇದು ದರ್ಶಿಸುತ್ತದೆ.

ಬಹುಮುಖಿ ಪ್ರತಿಭೆ: ಪತ್ರಿಕಾ ಕೃತಿಗಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಳ್ಳದೆ, ಬರಹಗಾರಿಕೆಯ ವಿವಿಧ ಮಗ್ಗುಲುಗಳಿಗೂ ಒಡ್ಡಿಕೊಂಡ ಮೋಗ್ಲಿಂಗ್, ಸಾಹಿತಿ, ಶಿಕ್ಷಕ, ಗಾದೆಗಳ ಸಂಗ್ರಹಕಾರ ಹೀಗೆ ವಿವಿಧ ಪಾತ್ರಗಳಲ್ಲಿ ಮೋಗ್ಲಿಂಗ್ ಕಾಣಿಸಿಕೊಂಡರು. ಗದಗ, ಹುಬ್ಬಳ್ಳಿ, ಮಡಿಕೇರಿ, ಮಂಗಳೂರು ಮುಂತಾದ ಪ್ರದೇಶಗಳಲ್ಲಿ ತಮ್ಮ ಪ್ರಮುಖ ಕಾರ್ಯಕ್ಷೇತ್ರಗಳನ್ನಾಗಿಸಿಕೊಂಡಿದ್ದ ಮೋಗ್ಲಿಂಗ್, ಸುಮಾರು 25 ವರ್ಷಗಳವರೆಗೆ ಕನ್ನಡಮ್ಮನ ಸೇವೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟವರು ಎಂದರೆ, ಅವರಲ್ಲಿ ಕೆನೆಗಟ್ಟಿದ್ದ ಕನ್ನಡ ಪ್ರೇಮವನ್ನು ಊಹಿಸಿಕೊಳ್ಳಿ. ಈ ಮಾತಿಗೆ ಪುಷ್ಟಿ ನೀಡುವಂತೆ, 1843ರಲ್ಲಿ ತಾವು ಪ್ರಕಟಿಸಿ ಜನಪ್ರಿಯತೆಯನ್ನು ದಕ್ಕಿಸಿಕೊಂಡ ಮಂಗಳೂರು ಸಮಾಚಾರ ಪತ್ರಿಕೆಯು ಹೊರಗಿನ ಕನ್ನಡ ಭಾಷಿಕ ಜನರಿಗೂ ತಲುಪುವಂತಾಗಬೇಕೆಂದು ಸಂಕಲ್ಪಿಸಿ, ಪತ್ರಿಕೆಯ ಹೆಸರನ್ನು ಕನ್ನಡ ಸಮಾಚಾರ ಎಂದು ಬದಲಾಯಿಸಿದರು ಹಾಗೂ ಅಚ್ಚುಮೊಳೆಗಳಿಂದ ಮುದ್ರಿಸಿ ಪ್ರಕಟಿಸುವಂತಾಗಲೆಂದು ಬಳ್ಳಾರಿಯಲ್ಲಿದ್ದ ಮತ್ತೊಬ್ಬ ಮಿಷನರಿಯ ಸುಪರ್ದಿಗೆ ಅದನ್ನು ವಹಿಸಿದರು (ಆದರೆ ಅದರ 3 ಸಂಚಿಕೆಗಳು ಮಾತ್ರ ಪ್ರಕಟಗೊಂಡು ಕಾರಣಾಂತರಗಳಿಂದ ನಿಂತುಹೋಯಿತು). ಪಟ್ಟುಬಿಡದ ಮೋಗ್ಲಿಂಗ್ ತರುವಾಯದಲ್ಲಿ ಕನ್ನಡ ವಾರ್ತಿಕ ಎಂಬ ಮತ್ತೊಂದು ಪತ್ರಿಕೆಯನ್ನು ಪ್ರಕಟಿಸಿದರು.

ಮೋಗ್ಲಿಂಗ್ ಅವರು ಕನ್ನಡದ ಪತ್ರಿಕಾ ರಂಗಕ್ಕೆ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಅನುಪಮ ಸೇವೆಯನ್ನು ಗುರುತಿಸಿದ ಜರ್ಮನಿಯ ಟ್ಯೂಬಿಂಗನ್ ವಿಶ್ವವಿದ್ಯಾಲಯವು 1858ರಲ್ಲಿ ಅವರಿಗೆ ಗೌರವ ಡಾಕ್ಟರೇಟ್‌ನೊಂದಿಗೆ ಪುರಸ್ಕರಿಸಿತು. ಕನ್ನಡವನ್ನು ತಾಯ್ನುಡಿಯಾಗಿ ಹೊಂದಿಲ್ಲದ, ಕನ್ನಡಿಗರಲ್ಲದ ವಿದೇಶಿ ವ್ಯಕ್ತಿಯೊಬ್ಬರು ಹೀಗೆ ತಪಸ್ಸಿನ ರೀತಿಯಲ್ಲಿ ಕನ್ನಡದ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದು ಬೆರಗಿನ ಸಂಗತಿಯೇ ಸರಿ. ಕನ್ನಡ ಪತ್ರಿಕೋದ್ಯಮವು ಕಣ್ತೆರೆಯುವುದಕ್ಕೆ ಕಾರಣಕರ್ತರಾದ ಹರ್ಮನ್ ಮೋಗ್ಲಿಂಗ್‌ರನ್ನು ನಮ್ಮಂಥ ಪತ್ರಕರ್ತರು ನಿಜಕ್ಕೂ ತಂಪುಹೊತ್ತಿನಲ್ಲಿ ನೆನೆಯಬೇಕು...

ಹಳಗನ್ನಡಕ್ಕೆ ಮನಸೋತ ಹರ್ಮನ್: ಹಳಗನ್ನಡ ಕಾವ್ಯಗಳನ್ನು ಚಿರಸ್ಥಾಯಿಯಾಗಿಸಬೇಕೆಂದು ಸಂಕಲ್ಪಿಸಿದ ಮೋಗ್ಲಿಂಗ್, ಅದಕ್ಕಾಗಿ ಮಹತ್ವಾಕಾಂಕ್ಷಿ ಯೋಜನೆಯನ್ನೇ ಹಮ್ಮಿಕೊಂಡರು. ಮೊದಲಿಗೆ ಹಳಗನ್ನಡದ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಅವನ್ನು ತಿದ್ದುಪಡಿ ಮಾಡಿಸಿ ಶುದ್ಧ ಹಸ್ತಪ್ರತಿಯನ್ನು ಸಜ್ಜುಗೊಳಿಸಿ, ನಂತರ ಕಲ್ಲಚ್ಚಿನ ಮುದ್ರಣಕ್ಕೆ ಅಣಿಗೊಳಿಸುವುದು ಮೋಗ್ಲಿಂಗ್ ಅವರ ಕನಸಾಗಿತ್ತು. ಕಲ್ಲಚ್ಚಿಗೆ ಬೇಕಾಗುವ ಗುಣಮಟ್ಟದ ಶಿಲೆಗಳನ್ನು ಜರ್ಮನಿಯಿಂದಲೇ ತರಿಸಿ, ಅದರ ಮೇಲೆ ದುಂಡಾಗಿ ಬರೆಯುವವರನ್ನು ಗೊತ್ತುಮಾಡಿ, ಲಕ್ಷ್ಮೀಶ ಕವಿಯ ಜೈಮಿನಿ ಭಾರತ, ಕುಮಾರವ್ಯಾಸ ಭಾರತದ ಒಂದಿಷ್ಟು ಪರ್ವಗಳು, ಕಾಶೀರಾಮದಾಸರ ಹರಿಭಕ್ತಿಸಾರ, ತೊರವೆ ರಾಮಾಯಣ, 640 ಪುಟಗಳ ಬಸವ ಪುರಾಣ ಮುಂತಾದ ಕಾವ್ಯಗಳಲ್ಲದೆ, ರಾವಣ ದಿಗ್ವಿಜಯ ಎಂಬ ಯಕ್ಷಗಾನ ಪ್ರಸಂಗವನ್ನೂ ಕಲ್ಲಚ್ಚಿನಲ್ಲಿ ರೂಪಿಸಿದರು ಮೋಗ್ಲಿಂಗ್. ಸಾಲದೆಂಬಂತೆ, ಪುರಂದರದಾಸರು, ಕನಕ ದಾಸರು, ವಿಜಯದಾಸರು ಸೇರಿದಂತೆ ಅನೇಕ ಹರಿದಾಸರ ಕೀರ್ತನೆಗಳನ್ನೂ ಹೀಗೆ ಮುದ್ರಿಸಿದ್ದು ಹರ್ಮನ್ ಹೆಗ್ಗಳಿಕೆ.




ಸಾರಸ್ವತ ಸಾಂಗತ್ಯ: ಹಳಗನ್ನಡದ ಕಾವ್ಯಗಳ ಜತೆಗೆ ಒಡನಾಡಿದ್ದರ ಫಲವೆಂಬಂತೆ ಹರ್ಮನ್ ಮೊಗ್ಲಿಂಗ್‌ರಲ್ಲಿ ಸಾರಸ್ವತ ಪ್ರಜ್ಞೆ ಮತ್ತಷ್ಟು ಜಾಗೃತವಾಯಿತು. ಹೀಗಾಗಿ, ಕ್ರೈಸ್ತಗೀತೆಗಳನ್ನು ಕನ್ನಡಕ್ಕೆ ಅನುವಾದಿಸುವ ಒಲವು ಅವರಲ್ಲಿ ಮೂಡಿತು. ನಂತರ, ಪಿಲಿಗ್ರಿಮ್ಸ್ ಪ್ರೋಗ್ರೆಸ್ ಎಂಬ ಕಾದಂಬರಿಯ ಮೊದಲ ಭಾಗದಲ್ಲಿ ಬರುವ 20 ಕ್ಲಿಷ್ಟ ಪದ್ಯಗಳನ್ನು ತಮ್ಮ ಒಡನಾಡಿಯ ನೆರವಿನೊಂದಿಗೆ ಮೋಗ್ಲಿಂಗ್ ಕನ್ನಡಕ್ಕೆ ಅನುವಾದಿಸಿದರು. ಸಾಲದೆಂಬಂತೆ, ಬದುಕಿನ ಉತ್ತರಾರ್ಧದಲ್ಲಿ ತಮಗೆ ನೆಲೆಯಿತ್ತ ಕೊಡಗು ಪ್ರದೇಶದ ಋಣವನ್ನು ತೀರಿಸಲೋ ಎಂಬಂತೆ, ಕೊಡಗರ ಜೀವನಶೈಲಿ, ಇತಿಹಾಸ, ಹಬ್ಬ-ಹರಿದಿನಗಳ ವಿವರಗಳನ್ನು ಒಳಗೊಂಡ ಕೂರ್ಗ್ ಮೆಮೊಯರ್ಸ್ ಎಂಬ ಕೃತಿಯನ್ನೂ ಮೋಗ್ಲಿಂಗ್ ರಚಿಸಿದರು. ಅನನ್ಯ ಇತಿಹಾಸ ಪ್ರಜ್ಞೆಯು ಢಾಳಾಗಿ ಹೊಮ್ಮುವ ಈ ಕೃತಿಯಲ್ಲಿ, ಕೊಡಗಿನ ಹಿರಿಯ ವೀರರಾಜೇಂದ್ರನ ಧೈರ್ಯ-ಶೌರ್ಯಗಳನ್ನೂ, ಚಿಕವೀರರಾಜೇಂದ್ರನ ನಿರ್ದಯ ಪ್ರವೃತ್ತಿಯನ್ನೂ ಮೋಗ್ಲಿಂಗ್ ಬಣ್ಣಿಸಿದ್ದಾರೆ. ರಾಜೇಂದ್ರ ನಾಮಾ ಎಂಬುದು ಕೊಡಗು ಪ್ರದೇಶಕ್ಕೆ ಸಂಬಂಧಿಸಿದಂತೆ ಹರ್ಮನ್ ಮೋಗ್ಲಿಂಗ್ ಸಂಪಾದಿಸಿ ಪ್ರಕಟಿಸಿದ ಮತ್ತೊಂದು ಮಹೋನ್ನತ ಕೃತಿ. ಇದು ಒತ್ತಕ್ಷರ ಗಳಿಲ್ಲದ ಕೃತಿ (ರಾಜೇಂದ್ರ ನಾಮಾ ಎಂಬ ರೀತಿಯಲ್ಲಿ!) ಎಂಬುದು ಗಮನಿಸಬೇಕಾದ ಸಂಗತಿ.

ನಿವೃತ್ತಿಯಲ್ಲೂ ಬಿಡದ ಪ್ರವೃತ್ತಿ: ನಿಯೋಜಿತ ಕಾರ್ಯಭಾರದಿಂದ 1860ರಲ್ಲಿ ನಿವೃತ್ತರಾದ ಹರ್ಮನ್ ಮೋಗ್ಲಿಂಗ್ ಸ್ವದೇಶಕ್ಕೆ ಮರಳಬೇಕಾಯಿತು. ಆದರೆ, ನಿವೃತ್ತಿಯಾಗಿದ್ದು ವೃತ್ತಿಯಿಂದಲೇ ವಿನಾ ಪ್ರವೃತ್ತಿಯಿಂದಲ್ಲ! ಸ್ವದೇಶಕ್ಕೆ ಮರಳಿದ ನಂತರವೂ ಮೋಗ್ಲಿಂಗ್ ಅವರು ಕನ್ನಡ ಕಸ್ತೂರಿಯ ಕಂಪಿನಿಂದ ದೂರವಾಗಲಿಲ್ಲ. ತಮ್ಮಂತೆಯೇ ಮಿಷನರಿ ಕೆಲಸಕ್ಕೆ ಒಡ್ಡಿಕೊಂಡಿದ್ದ ಫರ್ಡಿನೆಂಟ್ ಕಿಟೆಲ್ ಅವರಿಗೆ ಕನ್ನಡ ನಿಘಂಟು ಕೃತಿಯನ್ನು ಹೊರತರುವ ಕಾರ್ಯಭಾರವನ್ನು ಹೊರಿಸುವಂತೆ ಬ್ರಿಟಿಷ್ ಸರಕಾರಕ್ಕೆ ಮನವೊಲಿಸಿದರು ಮೋಗ್ಲಿಂಗ್.

ಹೀಗೆ ಕಿಟೆಲ್ಲರು ತಮ್ಮ ಧರ್ಮಪ್ರಚಾರದ ಕೆಲಸವನ್ನು ಬದಿಗಿಟ್ಟು ಕನ್ನಡ ನಿಘಂಟಿನ ರಚನೆಯಲ್ಲಿ ವ್ಯಸ್ತರಾಗುವಲ್ಲಿ ಹರ್ಮನ್ ಮೋಗ್ಲಿಂಗ್ ಅವರ ಯೋಗದಾನವಿದೆ. ಕಿಟೆಲ್ಲರು ಈ ಕೈಂಕರ್ಯವನ್ನು ಶುರುಮಾಡಿದ್ದು ಹರ್ಮನ್ ಮೋಂಗ್ಲಿಂಗ್ ಅವರ ಮನೆಯಿಂದಲೇ ಅಂತೆ!

ಕನ್ನಡದ ಹರಿದಾಸರ 20 ಕೀರ್ತನೆಗಳನ್ನು ಜರ್ಮನ್ ಭಾಷೆಗೆ ಅನುವಾದಿಸಿ ಪ್ರಾಚ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಜರ್ಮನಿಯ ಪತ್ರಿಕೆಯೊಂದರಲ್ಲಿ ಟೀಕೆ-ಟಿಪ್ಪಣಿ ಸಹಿತ ಪ್ರಕಟಿಸಿದ್ದು, ತಾವು ಇನ್ನಿಲ್ಲದಂತೆ ಮೆಚ್ಚಿಕೊಂಡಿದ್ದ ಜೈಮಿನಿ ಭಾರತದ ಎರಡು ಸಂಧಿಗಳನ್ನು ಜರ್ಮನ್ ಭಾಷೆಗೆ ರೂಪಾಂತರಿಸಿದ್ದು ಹರ್ಮನ್ ಮೋಗ್ಲಿಂಗ್ ಅವರ ಕನ್ನಡ ಪ್ರೇಮಕ್ಕೆ ಮತ್ತಷ್ಟು ಪುರಾವೆಗಳಾಗುತ್ತವೆ.

**- ಯಗಟಿ ರಘು** ನಾಡಿಗ್

# ಸತಿ-ಪತಿಗಳಿಬ್ಬರು ಬದುಕಿನ ಬಂಡಿಯ ಚಕ್ರಗಳಿದ್ದಂತೆ

## ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ನಿರ್ಮಲಾನಂದನಾಥ ಶ್ರೀ | ಹೊಸ ಜೀವನಕ್ಕೆ ಕಾಲಿಟ್ಟ 20 ಜೋಡಿಗಳು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಜೀವನವೆಂಬ ಸಾಗರದಲ್ಲಿ ಸಮಸ್ಯೆ ಎಂಬ ಅದೆಷ್ಟೋ ಅಲೆಗಳು ಎದುರಾಗಿ ಬಂದರೂ ದಂಪತಿಗಳಿಬ್ಬರು ಎದುರಿಸಿ ನಿಲ್ಲುವುದೇ ಬದುಕು ಎಂದು ಆದಿಚುಂಚನ ಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಪುರಾಣ ಪ್ರಸಿದ್ಧ ಶ್ರೀಕ್ಷೇತ್ರ ಕಬ್ಬಳಿಯಲ್ಲಿ ಶ್ರೀ ಬಸವೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವದ ಪ್ರಯುಕ್ತ ಸೋಮವಾರ ನಡೆದ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ನವ ಜೀವನಕ್ಕೆ ಕಾಲಿಟ್ಟ ವಧು-ವರರನ್ನು ಹರಸಿ ಆಶೀರ್ವಚನ ನೀಡಿದರು. ಸತಿ-ಪತಿಗಳೆಂದರೆ ಬದುಕಿನ ಬಂಡಿಯ ಎರಡು ಚಕ್ರಗಳಿದ್ದಂತೆ. ಒಂದು ಚಕ್ರ ಉರುಳದಿದ್ದರೂ ಬದುಕು ನಿಂತ ನೀರಾಗಿ ಬಿಡುತ್ತದೆ. ಎರಡೂ ಚಕ್ರಗಳು ಸಮನಾಗಿ ಸಾಗಿದರೆ ಬದುಕಿನ ದಡವನ್ನು ಸುಲಭವಾಗಿ ತಲುಪಬಹುದೆಂದು ತಿಳಿಸಿದರು.

ದೇವರು ಕರ್ಮ ಹಾಗೂ ಪೂರ್ವ ಫಲಗಳನ್ನು ಹೊಂದಿಸಿ ಒಂದು ಗಂಡಿಗೆ ಮತ್ತೊಂದು ಹೆಣ್ಣನ್ನು ಕೂಡಿಸುವ ಮೂಲಕ ಸ್ವರ್ಗದಲ್ಲಿಯೇ ಮದುವೆ ನಿಶ್ಚಯ ಮಾಡಿರುತ್ತಾನೆ. ಇಲ್ಲಿ ಗುರು-ಹಿರಿಯರ ಆಶೀರ್ವಾದ ಹಾಗೂ ದೇವತೆಗಳ ಸಾಕ್ಷಿಯೊಂದಿಗೆ ನವಜೀವನ ಪ್ರಾರಂಭವಾಗಲಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಆಯೋಗದ ಅಧ್ಯಕ್ಷ ಡಾ.ನಾಗಲಕ್ಷ್ಮಿ ಚೌಧರಿ ಅವರು ಮಾತನಾಡಿ, ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯರು ಕಾರ್ಯೋನ್ಮುಖರಾಗಿ ಸಾಧನೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ. ಮಹಿಳೆ ಎಂದಿಗೂ ದುರ್ಬಲಳಲ್ಲ ಎಂಬುದು ಪದೇ ಪದೇ ಸಾಬೀತಾಗುತ್ತಿದೆ. ಆಧುನಿಕತೆ ಮುಂದುವರಿದಿದ್ದರೂ ಇಂದಿಗೂ ಮಹಿಳೆಯರ ಮೇಲೆ ದೌರ್ಜನ್ಯ, ಬಾಲಕಾರ್ಮಿಕ ಪದ್ಧತಿ, ಬಾಲ್ಯ ವಿವಾಹ ಸೇರಿ ವಿವಿಧ ಅನಿಷ್ಟ ಪದ್ಧತಿಗಳು ಜೀವಂತವಾಗಿದ್ದು, ಸಮಾಜದಲ್ಲಿ ಪಿಡುಗಾಗಿ ಪರಿಣಮಿಸುತ್ತಿವೆ. ಈ ಎಲ್ಲವನ್ನು ನಿರ್ಮೂಲನ ಗೊಳಿಸಲು ಸಾರ್ವಜನಿಕರ ಸಹಕಾರ ಅಗತ್ಯ ಎಂದು ತಿಳಿಸಿದರು.



ಚಿಕ್ಕ ವಯಸ್ಸಿನಲ್ಲಿಯೇ ಅಥವಾ ಪ್ರಭುದ್ದತೆ ಬೆಳೆಯದೆ ಇರುವ ಯುವಕ ಯುವತಿಯರನ್ನು ಮದುವೆ ಮಾಡುತ್ತಿದ್ದು, ಅಂತಹ ದಂಪತಿಗಳು ಕೆಲವೇ ದಿನಗಳಲ್ಲಿ ವಿಚ್ಛೇದನಕ್ಕೆ ಮುಂದಾಗುತ್ತಿರುವುದು ಕಂಡುಬರುತ್ತದೆ. ವರದಕ್ಷಿಣೆ ಕಿರುಕುಳ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಕಂಡುಬಂದಲ್ಲಿ ಕಾನೂನು ಕ್ರಮ ಎದುರಿಸಬೇಕಾಗುತ್ತದೆಂದು ಎಚ್ಚರಿಸಿದರು.

ಶ್ರೀ ಕ್ಷೇತ್ರದಲ್ಲಿ ಜರುಗಿದ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ 20 ಜೋಡಿ ನವ ವಧು-ವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ದಾನಿಗಳಾದ ಬೆಂಗಳೂರಿನ ಉದ್ಯಮಿ ಪ್ರದೀಪಾ ವೆಂಕಟೇಶ ಪ್ರಸಾದ್ ವಧುವರರಿಗೆ ವಸ್ತ್ರ, ಮಾಂಗಲ್ಯ, ಹೂವಿನ ಹಾರಗಳು, ಬಾಸಿಂಗ-ಪೇಟ ಹಾಗೂ ಪ್ರಸಾದದ ವ್ಯವಸ್ಥೆಯನ್ನು ಕಲ್ಪಿಸಿದ್ದರು.



ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಶ್ರೀಕ್ಷೇತ್ರ ಕಬ್ಬಳಿ ಶಾಖಾ ಮಠದ ಶ್ರೀ ಶಿವಪುತ್ರನಾಥ ಸ್ವಾಮೀಜಿ, ರಾಜಾಪುರ ಗೇಟ್ ಶ್ರೀ ಸಾಯಿ ಸಿದ್ದಾಶ್ರಮದ ಗುರುಮೂರ್ತಿ ಗುರೂಜಿ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಹೆಚ್.ಎಸ್.ವಿಜಯ ಕುಮಾರ್, ಮಾಜಿ ಸದಸ್ಯೆ ಕುಸುಮ ಬಾಲಕೃಷ್ಣ, ದಾನಿಗಳಾದ ಪ್ರದೀಪಾ ವೆಂಕಟೇಶ ಪ್ರಸಾದ್, ಪ್ರಮುಖರಾದ ಸುರಭಿ ರಘು, ಗುಡಿಗೌಡ ಪ್ರಕಾಶ್, ಪೊಲೀಸ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಮತ್ತು ಸುತ್ತಮುತ್ತಲ ಗ್ರಾಮಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

# ಹೋರಾಟದಿಂದಷ್ಟೇ ಮಹಿಳೆಯರಿಗೆ ಜಯ ಸಾಧ್ಯ

» ಮೊದಲನೇ ಪುಟದಿಂದ

ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಸೇರಿ ಸರ್ಕಾರದ ಎಲ್ಲಾ ಕಚೇರಿಗಳು ತೆರದ ಮನೆಯಾಗಬೇಕು. ಇದೇ ಉದ್ದೇಶ ದಿಂದ ಪೊಲೀಸ್ ಠಾಣೆಯಲ್ಲಿ ತೆರೆದ ಮನೆ ಯೋಜಿತ ಕಾರ್ಯಕ್ರಮ ಪ್ರಾರಂಭವಾಗಿದೆ. ಸ್ಥಳೀಯ ಶಾಲೆ ಗಳಿಗೆ ಮನೆಗಳಿಗೆ ಪೊಲೀಸರು ಭೇಟಿ ನೀಡಿ ಪೊಲೀಸ್ ಠಾಣೆ ಬಗ್ಗೆ ಮಾಹಿತಿ ನೀಡುತ್ತಿದ್ದಾರೆ. ಪೊಲೀಸರ ಕಂಡರೆ ಭಯಪಡದಂತೆ ಮಾಹಿತಿ ನೀಡು ತ್ತಿದ್ದಾರೆಂದರು.

ಗ್ರಾಮಗಳಲ್ಲಿ ರಸ್ತೆ, ನೀರು, ಚರಂಡಿ ಇತರೆ ಸಮಸ್ಯೆಗಳಿದ್ದರೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗಳ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸಿಕೊಳ್ಳಬೇಕು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಮಸ್ಯೆ ಯನ್ನು ಆಲಿಸದಿದ್ದರೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವ ಹಣಾಧಿಕಾರಿಗೆ ದೂರು ನೀಡ ಬೇಕೆಂದು ತಿಳಿಸಿದರು.

ಸತ್ಯಾಸತ್ಯತೆ ಅರಿಯದೆ ಯಾವು ದನ್ನೂ ಒಪ್ಪಬಾರದು. ವದಂತಿಗಳಿಗೆ ಕಿವಿಕೊಡಬಾರದು. ಹಿರಿಯರಿಗೆ ಗೌರವಿಸಬೇಕು. ಹೆಣ್ಣು ಮಕ್ಕಳು ಮಾತೃತ್ವ ನಾಯಕಿ, ರಾಜಕೀಯ ನಾಯಕತ್ವ ಮಹತ್ವ ಹೊಂದಿದ್ದಾಳೆ. ವಿದ್ಯೆ ಜೊತೆಗೆ ವಿನಯ ವನ್ನು ರೂಢಿಸಿ ಕೊಂಡು ಒಳ್ಳೆಯ ಪ್ರಜೆಗಳಾಗ ಬೇಕೆಂದರು.

ಕರ್ನಾಟಕ ತುರ್ತು ಸಹಾಯ ವಾಣಿ 112, ಮಹಿಳಾ ಸಹಾಯ ವಾಣಿ 181, ಸೈಬರ್ ಸಹಾಯವಾಣಿ 1908 ಸಂಖ್ಯೆಗಳನ್ನು ಮೊಬೈಲ್‌ಗಳಲ್ಲಿ ನಮೂದಿಸಿ ಅವಶ್ಯವಿದ್ದಾಗ ಕರೆ ಮಾಡಿ ಸಹಾಯ ಪಡೆಯ ಬೇಕೆಂದು ಸಲಹೆ ನೀಡಿದರು.

ಯಾವುದೇ ಒಂದು ಪ್ರಕರಣ ನಡೆದರೆ ಯಾವುದಾದರೂ ಪೊಲೀಸ್ ಠಾಣೆಗೆ ಭೇಟಿ ನೀಡಿ ಜೀರೋ ಎಫ್‌ಐಆರ್ ಅನ್ನು ದಾಖಲಿಸಿ ಸಂಬಂಧಪಟ್ಟ ಠಾಣೆಗೆ ವರ್ಗಾವಣೆ ಮಾಡುತ್ತಾರೆ. ತಂದೆ ತಾಯಿ ಹಳ್ಳಿಯಿಂದ ಮಕ್ಕಳನ್ನು ಓದಲು ಕಳುಹಿಸಿರುತ್ತಾರೆ. ಈ ಸಮ ಯದಲ್ಲಿ ಮೊಬೈಲ್‌ಗಳಿಗೆ ನಾವು ದಾಸ ರಾಗದೆ ಅಮೂಲ್ಯವಾದ ಸಮಯ ವನ್ನು ಬಳಸಿಕೊಂಡು ದೊಡ್ಡ ಸಾಧನೆ ಯನ್ನು ಮಾಡಬೇಕು ಎಂದರು.

ಇತ್ತೀಚಿನ ದಿನಗಳಲ್ಲಿ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾತಿರುವು ದಕ್ಕಿಂತ ಹೆಚ್ಚಾಗಿ ಸಾವಿರಾರು ಸೈಬರ್ ಪ್ರಕರಣಗಳುದಾಖಲಾಗುತ್ತಿವೆ. ಸಾಮಾಜಿಕ ಜಾಲತಾಣದಲ್ಲಿ ತಮ್ಮ ವೈಯಕ್ತಿಕ ವಿಷಯ, ದೂರವಾಣಿ ಸಂಖ್ಯೆಯನ್ನು ಹಂಚಿಕೊಳ್ಳಬಾರದು. ಎಲ್ಲವನ್ನೂ ಗೌಪ್ಯವಾಗಿಡಬೇಕು. ಸಾಮಾಜಿಕ ಜಾಲತಾಣದಲ್ಲಿ ಬರುವ ಎಪಿಕೆ ಅಪ್ಲಿಕೇಶನ್ ಲಿಂಕ್‌ಗಳನ್ನು, ವಿಡಿಯೋ ಕರೆಗಳನ್ನು ಓಪನ್‌ಮಾಡಬಾರದೆಂದು ತಿಳಿಸಿದರು.

**ಅಪರಿಚಿತರ ಜೊತೆ ಸಲುಗೆ ಬೇಡ**

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರು ಮಾತ ನಾಡಿ, ಸಾಮಾಜಿಕ ಜಾಲತಾಣ ಬಳಕೆಯ ಬಗ್ಗೆ ಹೆಣ್ಣು ಮಕ್ಕಳಿಗೆ ಹೆಚ್ಚಿನ ಅರಿವು ಇರಬೇಕು. ಅಪರಿಚಿತ ವ್ಯಕ್ತಿಯ ಸ್ನೇಹ ಮಾಡುವಾಗ ಎಚ್ಚರವಿರಲಿ, ಫೇಸ್‌ಬುಕ್ ಹಾಗು ಇನ್ಸ್ಟಾಗ್ರಾಮ್‌ಗಳಲ್ಲಿ ಫಾಲೋ ಹೆಚ್ಚಳಕ್ಕಾಗಿ ಅಪರಿಚಿತರ ಸ್ನೇಹ ಬೆಳೆಸಬಾರದೆಂದು ಹೇಳಿದರು. ಪ್ರಸ್ತುತ ಸಮಾಜದಲ್ಲಿ ತಾಂತ್ರಿಕತೆ ಬದಲಾವಣೆಯಾದಂತೆ ಸಮಸ್ಯೆಗಳು ಹೆಚ್ಚಾಗುತ್ತಿವೆ. ಯಾವುದೇ ಸಮಸ್ಯೆಯನ್ನು ಎದುರಿಸಬೇಕಾದರೆ ಧೈರ್ಯ ವಾಗಿರಬೇಕು. ಏನೇ ಸಹಾಯ ಬೇಕಿದ್ದರೂ ಹತ್ತಿರದ ಪೊಲೀಸ್ ಠಾಣೆಗೆ ಭೇಟಿ ನೀಡ ಬೇಕೆಂದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಅಪರ ಜಿಲ್ಲಾಧಿಕಾರಿ ಮಂಜುನಾಥ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಧರಣಿ ಕುಮಾರ, ಪ್ರಾಂಶುಪಾಲ ಬಸವರಾಜ್ ಇದ್ದರು.

### ನಾಳೆ ಲೋಕ ಕಲ್ಯಾಣಾರ್ಥ ಸತ್ಯನಾರಾಯಣ ಪೂಜೆ

**ಹೊಳೆನರಸೀಪುರ:** ಪಟ್ಟಣದ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯದಲ್ಲಿ ನ.5ರಂದು ಕಾರ್ತಿಕ ಮಾಸದ ಹುಣ್ಣಿಮೆ ಪ್ರಯುಕ್ತ ಲೋಕ ಕಲ್ಯಾಣಾರ್ಥವಾಗಿ ಹಾಗು ಭಕ್ತರ ಮನಃ ಸಂಕಲ್ಪ ಸಿದ್ಧಿಗಾಗಿ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಕಾರ್ಯ ಕ್ರಮ ಹಮ್ಮಿಕೊಳ್ಳಲಾಗಿದೆ.

ಬುಧವಾರ ಮುಂಜಾನೆ ಶ್ರೀ ಸ್ವಾಮಿಯ ಮೂಲ ಮೂರ್ತಿಗೆ ಪಂಚಾ ಮೃತಾಭಿಷೇಕ, 10 ಗಂಟೆಗೆ ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜೆ, ಮಧ್ಯಾಹ್ನ 1 ಗಂಟೆಗೆ ಮಹಾಮಂಗ ಳಾರತಿ ಮತ್ತು ತೀರ್ಥಪ್ರಸಾದ ವಿನಿ ಯೋಗ ಜೊತೆಗೆ ಪ್ರಸಾದ ರೂಪದಲ್ಲಿ ಅನ್ನಸಂತರ್ಪಣೆ ಆಯೋಜನೆ ಮಾಡಲಾಗಿದೆ.

ಸಂಜೆ 6.30ಕ್ಕೆ ಕೋಟೆ ರಾಜ ಬೀದಿಗಳಲ್ಲಿ ಶ್ರೀಗಳವರ ಉತ್ಸವ ನಂತರ ದೇವಾಲಯದ ಪ್ರಾಂಗಣದಲ್ಲಿ ಕೃತ್ತಿಕೋತ್ಸವ, ವಿಶೇಷ ತಂಡದಿದ ನಾದಸ್ವರ, ಪಟಾಕಿ ಮತ್ತು ಮಹಾ ಪ್ರಸಾದ ಸೇವೆ ಆಯೋಜನೆ ಮಾಡಲಾಗಿದೆ.

### ಕೆ.ಹೊಸಕೋಟೆ ಆಸ್ಪತ್ರೆಗೆ ನೂತನ ವೈದ್ಯರ ನಿಯೋಜನೆ

**ಆಲೂರು:** ಕೆಲವು ತಿಂಗಳಿಂದ ಖಾಲಿ ಇದ್ದ ಕೆ.ಹೊಸಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಡಾ॥ವಿದ್ಯಾಶ್ರೀ ಅವರನ್ನು ನಿಯೋಜನೆ ಮಾಡಿದ್ದು, ಗ್ರಾಮಸ್ಥರ ಹಲವು ದಿನಗಳ ಬೇಡಿಕೆಗೆ ಫಲ ದೊರೆತಿದೆ.

ವೈದ್ಯರಿಲ್ಲದೆ ಸಾರ್ವಜನಿಕರು ತುಂಬಾ ತೊಂದರೆ ಅನುಭವಿಸುತ್ತಿದ್ದರು. ಈ ಬಗ್ಗೆ ಹಲವು ಬಾರಿ ಅಧಿಕಾರಿ ಹಾಗು ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಲಾಗಿತ್ತು. ಡಾ॥ ವಿದ್ಯಾಶ್ರೀ ಅವರು ಈ ಹಿಂದೆ 11 ವರ್ಷಗಳ ಕಾಲ ಆಸ್ಪತ್ರೆಯ ದಾದಿಯಾಗಿ ಕರ್ತವ್ಯ ನಿರ್ವಹಿಸಿದ್ದ ಕೋಮಲಾ ಅವರ ಪುತ್ರಿಯಾಗಿದ್ದಾರೆ. ಆಸ್ಪತ್ರೆಗೆ ಪ್ರತಿ ಎರಡು ದಿನಕ್ಕೆ ಒಬ್ಬ ವೈದ್ಯರನ್ನು ನಿಯೋಜನೆ ಮಾಡಲಾಗುತ್ತಿತ್ತು. ಈಗ ಪೂರ್ಣ ಪ್ರಮಾಣದ ವೈದ್ಯರ ನಿಯೋಜನೆ ಮಾಡಿರುವುದು ಅನುಕೂಲವಾಗಿದೆ. ಸ್ಥಳೀಯರು ವೈದ್ಯರಿಗೆ ಎಲ್ಲಾ ರೀತಿಯ ಸಹಕಾರ ನೀಡಿ ಆಸ್ಪತ್ರೆಗೆ ಒಳ್ಳೆಯ ಹೆಸರು ತರಬೇಕೆಂದು ತಾಲ್ಲೂಕು ರೈತ ಮುಖಂಡ ಹೈದೂರು ಜಯಣ್ಣ, ತಾಲ್ಲೂಕು ಚುಟುಕು ಸಾಹಿತ್ಯ ಪರಿಷತ್ ನಿಯೋಜಿತ ಅಧ್ಯಕ್ಷ ಕೆ.ಎಸ್.ಅನಿಲ್‌ಕುಮಾರ್ ಕೋರಿದ್ದಾರೆ.

# ಭಾರತ ಮಹಿಳಾ ತಂಡಕ್ಕೆ ವಿಶ್ವ ಕಿರೀಟ

• ಪ್ರಜೋದಯ ವರದಿ

**ಮುಂಬೈ:** ಮಹಿಳಾ ಕ್ರಿಕೆಟ್ ರಂಗದಲ್ಲಿ ಭಾನುವಾರ ಹೊಸ ಶಕೆ ಆರಂಭವಾಯಿತು. ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಭಾರತ ತಂಡವು ಮೊದಲ ಬಾರಿಗೆ ವಿಶ್ವ ಕಿರೀಟ ಮುಡಿಗೇರಿಸಿ ಕೊಂಡು ಚಾರಿತ್ರಿಕ ಸಾಧನೆ ಮೆರೆಯಿತು. ಹಲವು ವರ್ಷಗಳಿಂದ ಕೋಟ್ಯಾಂತರ ಕ್ರಿಕೆಟ್ ಅಭಿಮಾನಿಗಳು ಕಂಡಿದ್ದ ಕನಸು ನನಸಾಯಿತು. ಹರ್ಮನ್ ಪ್ರೀತ್ ಕೌರ್ ಬಳಗದ ಆಟಗಾರ್ತಿಯರು ಹರ್ಷದ ಹೊನಲಲ್ಲಿ ತೇಲಿದರು.




2005 ಮತ್ತು 2017ರ ಟೂರ್ನಿಗಳಲ್ಲಿ ಫೈನಲ್‌ನಲ್ಲಿ ಎಡವಿದ್ದ ಭಾರತ ತಂಡ ಈ ಬಾರಿ ಗುರಿ ತಪ್ಪಲಿಲ್ಲ. ದೀಪ್ತಿ ಶರ್ಮಾ ಮತ್ತು ಶಫಾಲಿ ವರ್ಮಾ ಅವರ ಆಲ್‌ರೌಂಡ್ ಆಟದ ಬಲದಿಂದ ಭಾರತವು 52 ರನ್‌ಗಳಿಂದ ದಕ್ಷಿಣ ಆಫ್ರಿಕಾ ವನಿತೆಯರ ಎದುರು ಜಯಭೇರಿ ಬಾರಿಸಿತು.

ದಕ್ಷಿಣ ಆಫ್ರಿಕಾ ತಂಡಕ್ಕೆ ಚೊಚ್ಚಲ ಪ್ರಶಸ್ತಿ ಜಯಿಸುವ ಅವಕಾಶ ಕೈತಪ್ಪಿತು. ಆದರೆ ತಂಡದ ನಾಯಕಿ ಲಾರಾ ವೋಲ್ವಾರ್ಟ್ (101 ರನ್, 98 ಎಸೆತ, 1 ಸಿಕ್ಸರ್, 11 ಬೌಂಡರಿ) ಅವರ ಅಮೋಘ ಶತಕವು ಇತಿಹಾಸದ ಪುಟ ಸೇರಿತು. ಅವರ ಬಳಗದ ದಿಟ್ಟ ಹೋರಾಟವೂ ಮನಗೆದ್ದಿತು.

ಮಧ್ಯಾಹ್ನ ಸುರಿದ ಮಳೆಯಿಂದಾಗಿ ಪಂದ್ಯವು ಎರಡು ತಾಸು ವಿಳಂಬವಾಗಿ ಆರಂಭವಾಯಿತು. ಶಫಾಲಿ ವರ್ಮಾ (87 ರನ್, 78ಎಸೆತ, 7 ಬೌಂಡರಿ, 2ಸಿಕ್ಸರ್) ಮತ್ತು ದೀಪ್ತಿ ಶರ್ಮಾ (58 ರನ್, 58ಎಸೆತ, 3 ಬೌಂಡರಿ, 1 ಸಿಕ್ಸರ್) ಅವರ ಅರ್ಧಶತಕಗಳ ಬಲದಿಂದ ಭಾರತ ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 298 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವನ್ನು ಕಟ್ಟಿಹಾಕುವಲ್ಲಿಯೂ ದೀಪ್ತಿ (39ಕ್ಕೆ5) ಮತ್ತು ಶಫಾಲಿ (36ಕ್ಕೆ2) ತಮ್ಮ ಸ್ಪಿನ್ ಕೈಚಳಕವನ್ನೂ ತೋರಿಸಿದರು. ಅದರಿಂದಾಗಿ ದಕ್ಷಿಣ ಆಫ್ರಿಕಾ ತಂಡಕ್ಕೆ 45.3 ಓವರ್‌ಗಳಲ್ಲಿ 246 ಗಳಿಸಲಷ್ಟೇ ಸಾಧ್ಯವಾಯಿತು.

ಏಳು ಬಾರಿಯ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ತಂಡವನ್ನು ಸೆಮಿಫೈನಲ್‌ನಲ್ಲಿ ಸೋಲಿಸಿದ್ದ ಭಾರತ ಮತ್ತು ನಾಲ್ಕು ಸಲ ಕಿರೀಟ ಧರಿಸಿದ್ದ ಇಂಗ್ಲೆಂಡ್ ತಂಡವನ್ನು ಮಣಿಸಿದ್ದ ದಕ್ಷಿಣ ಆಫ್ರಿಕಾ ಫೈನಲ್‌ನಲ್ಲಿ ಮುಖಾಮುಖಿಯಾಗಿದ್ದವು. 1983ರಲ್ಲಿ ಕಪಿಲ್ ದೇವ್ ನಾಯಕತ್ವದ ಭಾರತ ಪುರುಷರ ತಂಡವು ಮೊದಲ ಬಾರಿಗೆ ವಿಶ್ವಕಪ್ ಜಯಿಸಿತ್ತು. ಅದರ ನಂತರ ಭಾರತದ ಕ್ರಿಕೆಟ್ ಬೆಳೆದ ರೀತಿ ಅಗಾಧವಾದದ್ದು. ಇದೀಗ ಚೊಚ್ಚಲ ಪ್ರಶಸ್ತಿ ಜಯಿಸಿರುವ ಹರ್ಮನ್ ಬಳಗವು ಕೂಡ ಹೊಸ ಇತಿಹಾಸ ಬರೆದಿದೆ. ಭವ್ಯ ಭವಿಷ್ಯದ ಕನಸು ಗರಿಗೆದರಿದೆ.

### ವಿಶ್ವಕಪ್ ವಿಜೇತ ತಂಡಕ್ಕೆ ವಜ್ರದ ಉಡುಗೊರೆ

ಸೂರತ್: ಮಹಿಳಾ ವಿಶ್ವಕಪ್ ವಿಜೇತ ಭಾರತ ತಂಡದ ಆಟಗಾರ್ತಿಯರಿಗೆ ವಜ್ರದ ಆಭರಣ ಹಾಗೂ ಸೋಲಾರ್ ಪ್ಯಾನೆಲ್ ಅನ್ನು ಉಡುಗೊರೆ ನೀಡುವುದಾಗಿ ಉದ್ಯಮಿ ಹಾಗೂ ರಾಜ್ಯಸಭಾ ಸದಸ್ಯರಾಗಿರುವ ಗೋವಿಂದ ಧೋಲಾಕಿಯಾ ಅವರು ಘೋಷಿಸಿದ್ದಾರೆ.

ಭಾರತ ಮಹಿಳಾ ತಂಡವು ಭಾನುವಾರ ಮುಂಬೈನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡದ ವಿರುದ್ಧ 52 ರನ್‌ಗಳ ಗೆಲುವು ಸಾಧಿಸುವ ಮೂಲಕ ಚೊಚ್ಚಲ ವಿಶ್ವಕಪ್ ಮುಡಿಗೇರಿಸಿ ಕೊಂಡಿತು.

ಉಡುಗೊರೆ ನೀಡುವ ಕುರಿತು ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ಅವರಿಗೆ ಶ್ರೀ ರಾಮಕೃಷ್ಣ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್ ಸ್ಥಾಪಕ ಹಾಗೂ ಮುಖ್ಯಸ್ಥರಾಗಿರುವ ಗೋವಿಂದ ಧೋಲಾಕಿಯಾ ಅವರು ಪತ್ರ ಬರೆದಿದ್ದಾರೆ. ವಿಶ್ವಕಪ್ ವಿಜೇತ ತಂಡದ ಭಾಗವಾಗಿರುವ ಆಟಗಾರ್ತಿಯರಿಗೆ ವಜ್ರದ ಆಭರಣ ಹಾಗೂ ಅವರ ಮನೆಗಳಿಗೆ ಸೋಲಾರ್ ಅಳವಡಿಸಲು ಬಯಸಿದ್ದು, ದೇಶಕ್ಕೆ ಬೆಳಕು ನೀಡಿದವರ ಬದುಕುಗಳು ಕೂಡ ಬೆಳಕಿನಿಂದ ಕೂಡಿರಲಿ ಎಂದು ಗೋವಿಂದ ಧೋಲಾಕಿಯಾ ತಿಳಿಸಿದ್ದಾರೆ.

ಭಾರತ ಮಹಿಳಾ ತಂಡವು ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ಕೋಟ್ಯಾಂತರ ಭಾರತೀಯರ ಹೃದಯ ಗೆದ್ದಿದೆ. ಅವರಿಗೆ ನಮ್ಮ ಸಂಸ್ಥೆಯ ವತಿಯಿಂದ ಈ ಉಡುಗೊರೆ ನೀಡಲು ಹೆಮ್ಮೆಯಾಗುತ್ತಿದೆ ಎಂದು ಹೇಳಿದ್ದಾರೆ.

### ರಾಜ್ಯದಲ್ಲಿ 2,400 ಮೆಗಾವ್ಯಾಟ್ ಸೌರಶಕ್ತಿ ಉತ್ಪಾದನೆ

» ಮೊದಲನೇ ಪುಟದಿಂದ

ಕಾಣುತ್ತಾ, ಅದೇ ರೀತಿಯಲ್ಲಿ ಆಗ್ತಿತ್ತು. ಬಿಜೆಪಿಯ ಕೆಲವರಿಗೆ ಎಲ್ಲಾ ಒಳ್ಳೆ ಕೆಲಸ ವಿರೋಧ ಮಾಡೋದೆ ಅವರ ಕೆಲಸ. ಬಿಜೆಪಿಯವರ ಕಾಲದಲ್ಲಿ ಏನೂ ಮಾಡೋದಿಲ್ಲವೆಂದು ಆಕ್ರೋಶ ಹೊರ ಹಾಕಿದರು.

ಬೆಂಗಳೂರಿನಲ್ಲಿ ರಸ್ತೆ ಗುಂಡಿ ವಿಚಾರಕ್ಕೆ ಪ್ರತಿಕ್ರಿಯಿಸಿ, ಬಿಜೆಪಿಯ ವರು ನಾಲ್ಕು ವರ್ಷ ಅಧಿಕಾರದ ಲ್ಲಿದ್ದು ಏನು ಮಾಡಿದರು ಎಂದು ಪ್ರಶ್ನಿಸಿದ ಅವರು, ನಾನು ಬೆಂಗ ಳೂರು ಅಭಿವೃದ್ಧಿ ಸಚಿವ ಇದ್ದಾಗ ಮುಖ್ಯಮಂತ್ರಿ ಸೂಚನೆಯಂತೆ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಲು ಹೋದರೆ ಅದಕ್ಕೂ ಗಲಾಟೆ ಮಾಡಿದರು. ಎಲ್ಲಿ ಕಾಂಕ್ರೀಟ್ ರಸ್ತೆ ಆಗಿದೆ ಅಲ್ಲಿ ಗುಂಡಿ ಇಲ್ಲ, ಈ ವರ್ಷ ಮಳೆ ಹೆಚ್ಚಾಗಿ ರಸ್ತೆ ಗುಂಡಿ ಆಗಿದೆ. ಗುಂಡಿ ಮುಚ್ಚಲು ಹಣ ಬಿಡುಗಡೆಯಾಗಿದೆ ಅದು ಕೆಲಸ ಆಗುತ್ತೆ ಎಂದರು.

ಬೆಂಗಳೂರು ಟನಲ್ ವಿಚಾರವಾಗಿ ಮಾತನಾಡಿ, ಜಪಾನ್‌ನಲ್ಲಿ 40 ವರ್ಷದ ಹಿಂದೆಯೇ ಸಮುದ್ರದಲ್ಲಿ ಟನಲ್ ಮಾಡಿದ್ದಾರೆ. ಪ್ಯಾರಿಸ್, ಲಂಡನ್‌ಗಳ ನಡುವೆ ಟನಲ್ ಇದೆ ನಮ್ಮ ಮೆಟ್ರೋ ಯೋಜನೆಗೆ ಟನಲ್ ಮಾಡಿಲ್ಲವೇ. ಅಲ್ಲೆಲ್ಲಾ ಕೆರೆ ಬತ್ತಿ ಹೋಗಿದೆಯಾ ಎಂದು ಪ್ರಶ್ನಿಸಿದ ಅವರು, ಬಿಹಾರ ಚುನಾವಣೆಗಾಗಿ ಟನಲ್ ಎಂಬ ವಿಪಕ್ಷ ನಾಯಕ ಆರ್.ಅಶೋಕ್ ಆರೋಪಕ್ಕೆ ಪ್ರತಿಕ್ರಿಯಿಸಿ, ದೇಶದಲ್ಲಿ ಅವರೇ ಅಧಿಕಾರದಲ್ಲಿದ್ದಾರೆ. ಅವರು ಹಾಗೆ ಕಮೀಷನ್ ತೆಗೆದುಕೊಂಡು ಹೋಗುತ್ತಾರಾ, ಹಾಗೇನಾದರೂ ದಾಖಲೆ ಇದ್ದರೆ ಹೇಳಲಿ, ದಾಖಲೆ ಇಟ್ಟುಕೊಂಡು ದೂರು ಕೊಡಲಿ, ಆಗ ಕ್ರಮ ತೆಗೆದುಕೊಳ್ಳೋಣವೆಂದು ಬಿಜೆಪಿ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

ಬಿಜೆಪಿಯವರಿಗೆ ಒಳ್ಳೆ ಕೆಲಸ ಸಹಿಸಲು ಆಗಲ್ಲ. ಒಳ್ಳೆ ಕೆಲಸ ಆಗಿ ಟ್ರಾಫಿಕ್ ಸಮಸ್ಯೆ ಸರಿಯಾದರೆ ಇವರಿಗೆ ಮಾತಾಡೋಕೆ ವಿಷಯ ಸಿಗುವುದಿಲ್ಲ. ಅವರು ಆಡಳಿತ ಮಾಡೋ ರಾಜ್ಯದಲ್ಲಿ ಕೂಡ ಸಮಸ್ಯೆ ಗಳಿವೆ. ಹಾಗಾಗಿ ಅವರು ಏನೇ ಹೇಳಿ ದರೂ ಲೆಕ್ಕಕ್ಕೆ ತಗೋಬೇಡಿ, ನೀವು ಜನಪರ ಕೆಲಸ ಮಾಡಿ ಎಂದು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರಿಗೆ ಸಲಹೆ ನೀಡುತ್ತೇನೆ ಎಂದರು.

ಗೃಹ ಮಂಡಳಿಯ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ಸಿಇಎಸ್‌ಸಿ ತಾಂತ್ರಿಕ ನಿರ್ದೇಶಕಿ ಡಿ.ಜೆ.ದಿವಾಕರ್ ಮತ್ತು ಪ್ರಮುಖ ಅಧಿಕಾರಿಗಳು ಇದ್ದರು.

### ರಾಜ್ಯ ಮಟ್ಟದ ಕ್ರೀಡಾಕೂಟಕ್ಕೆ ವಿದ್ಯಾರ್ಥಿನಿಯರು ಆಯ್ಕೆ



• ಪ್ರಜೋದಯ ವರದಿ

**ಹಾಸನ: ನಗರ ಹೊರವಲಯದ ಅರೆಕಲ್ ಹೊಸಹಳ್ಳಿ ಶ್ರೀ ಸತ್ಯನಾರಾಯಣ ಪ್ರಸನ್ನ ಪ್ರೌಢ ಶಾಲೆಯ ವಿದ್ಯಾರ್ಥಿನಿಯರು ಜಿಲ್ಲಾ ಮಟ್ಟದ 14 ವರ್ಷ ವಯೋಮಿತಿಯ ಕ್ರೀಡಾಕೂಟದಲ್ಲಿ ಉತ್ತಮ ಪ್ರದರ್ಶನದ ಮೂಲಕ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.**

**ಡಿಸ್ಕಸ್ ಥ್ರೋ, ಎತ್ತರ ಜಿಗಿತದಲ್ಲಿ ಪ್ರಥಮ ಹಾಗು ಗುಂಡು ಎಸೆತದಲ್ಲಿ ವಿದ್ಯಾರ್ಥಿನಿ ಶರಣ್ಯ ತೃತೀಯ ಸ್ಥಾನ ಪಡೆದಿದ್ದಾರೆ. ಡಿಸ್ಕಸ್ ಥ್ರೋ ಮತ್ತು ಗುಂಡು ಎಸೆತದಲ್ಲಿ ಗಾಯತ್ರಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿನಿ ಕೃತಿಕಾ ಅವರು ಉದ್ದ ಜಿಗಿತದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ವಿಜೇತ ವಿದ್ಯಾರ್ಥಿಗಳಿಗೆ ಶಾಲಾ ಆಡಳಿತ ಮಂಡಳಿ, ಬೋಧಕ ಹಾಗು ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.**

### ಚಿರತೆ ದಾಳಿಗೆ ಗಾಯಗೊಂಡ ಹಸು

• ಪ್ರಜೋದಯ ವರದಿ

**ಕೊಣನೂರು:** ಅರಕಲಗೂಡು ತಾಲ್ಲೂಕು ರಾಮನಾಥಪುರ ಹೋಬಳಿ ಹಂಪಾಪುರ ಗ್ರಾಮ ದಲ್ಲಿ ಚಿರತೆ ದಾಳಿಗೆ ಹಸು ಗಂಭೀರ ಗಾಯಗೊಂಡಿರುವ ಘಟನೆ ನಡೆದಿದೆ.

ಹೋಬಳಿ ವ್ಯಾಪ್ತಿಯಲ್ಲಿ ಹಲವು ದಿನಗಳಿಂದ ಚಿರತೆ ಓಡಾಡುತ್ತಿದ್ದು ಅರಣ್ಯ ಇಲಾಖೆ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲವೆಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಕೊಟ್ಟಿಗೆ ಯಲ್ಲಿ ಕಟ್ಟಿದ ಹಸುವಿನ ಮೇಲೆ ಭಾನುವಾರ ರಾತ್ರಿ ಏಕಾಏಕಿ ದಾಳಿ ನಡೆಸಿರುವ ಚಿರತೆ ಕುತ್ತಿಗೆ ಭಾಗದಲ್ಲಿ ಗಂಭೀರ ಗಾಯಗೊಳಿಸಿದೆ. ಈ ಬಗ್ಗೆ ಅರಣ್ಯ ಇಲಾಖೆಗೆ ಮಾಹಿತಿ ನೀಡಿದರೆ ತಮ್ಮ ಬಳಿ ಚಿರತೆ ಸೆರೆಗೆ ಬೋನುಗಳಿಲ್ಲವೆಂದು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಹೀಗಾದರೆ ಸಮಸ್ಯೆಗೆ ಪರಿಹಾರ ಏನೆಂದು ಪ್ರಶ್ನಿಸಿದರು.

ಅರಣ್ಯದಂಚಿನ ಗ್ರಾಮದ ಮನೆಗಳ ಮೇಲೆ ನುಗ್ಗಿ ಬರುವ ಚಿರತೆ ಆಡು, ಕುರಿ, ಹಸುಗಳ ಮೇಲೆ ದಾಳಿ ಮಾಡುತ್ತಿದೆ. ಅದರಿಂದ ಜಮೀನು ಕೆಲಸಕ್ಕೆ ಹೋಗಲು ಭಯವಾಗುತ್ತಿದೆ. ಮಕ್ಕಳು ಹಾಗು ಮಹಿಳೆಯರು ಸಂಜೆ ಬಳಿಕ ಮನೆಯಿಂದ ಹೊರಬರಲು ಹಿಂದೇಟು ಹಾಕುತ್ತಿದ್ದಾರೆ. ಭಯದಿಂದ ವಿದ್ಯಾರ್ಥಿಗಳು ಶಾಲೆಗೆ ಹೋಗುತ್ತಿಲ್ಲ. ಅರಣ್ಯ ಇಲಾಖೆ ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು.

ಚಿರತೆ ಸೆರೆ ಹಿಡಿದು ಭಯ ರಹಿತ ವಾತಾವರಣ ಸೃಷ್ಟಿಸಬೇಕು. ಇಲ್ಲದಿದ್ದರೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸುವ ಎಚ್ಚರಿಕೆ ನೀಡಿದ್ದಾರೆ.

### 1.80 ಲಕ್ಷ ರೂ. ಮೌಲ್ಯದ ಕಾಫಿ ಕಳವು

• ಪ್ರಜೋದಯ ವರದಿ



**ಬೇಲೂರು:** ಮನೆಯ ಅಂಗಳದಲ್ಲಿ ಒಣಗಲು ಹಾಕಿದ್ದ ಅರೇಬಿಕಾ ಪಾರ್ಚ್‌ಮೆಂಟ್ ಕಾಫಿಯನ್ನು ಕಳವು ಮಾಡಿರುವ ಘಟನೆ ತಾಲ್ಲೂಕಿನ ಅರೇಹಳ್ಳಿ ಹೋಬಳಿ ಸಿದ್ದರಹಳ್ಳಿ ಗ್ರಾಮದಲ್ಲಿ ನಡೆದಿದೆ.

ಹೇಮೇಶ್ ಅವರು ತಮ್ಮ ಮನೆಯಲ್ಲಿ ಅಂಗಳ ದಲ್ಲಿ ಒಣಗಲು ಹಾಕಿದ್ದ ಕಾಫಿಯನ್ನು ರಾತ್ರಿ ವೇಳೆ ಕಳ್ಳರು ಅಂದಾಜು 1.80 ಲಕ್ಷರೂ. ಮೌಲ್ಯದ ಅರೇಬಿಕಾ ಪಾರ್ಚ್‌ಮೆಂಟ್ ಕಾಫಿಯನ್ನು ಕಳವು ಮಾಡಿದ್ದಾರೆ. ಕಾಫಿಗೆ ಉತ್ತಮ ಬೆಲೆ ಇರುವುದರಿಂದ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿವೆ. ಅರೇಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಈ ವರ್ಷ ದಾಖಲಾಗಿರುವ ಐದನೇ ಕಳ್ಳತನ ಪ್ರಕರಣ ಇದಾಗಿದೆ. ಹೀಗಾಗಿ ರಾತ್ರಿ ವೇಳೆಯಲ್ಲಿ ಪೊಲೀಸ್ ಗಸ್ತು ಬಲಪಡಿಸಿ, ಸ್ಥಳೀ ಯರು ಹಾಗು ಹೊರಗಿನವರ ಚಲನವಲನದ ಮೇಲೆ ನಿಗಾ ವಹಿಸಬೇಕು. ಇಲ್ಲವಾದರೆ ರೈತರು ದಿನೇ ದಿನೇ ನಷ್ಟ ಅನುಭವಿಸುತ್ತಿದ್ದಾರೆ ಂದು ತಾಲ್ಲೂಕು ಬೆಳಗಾರರ ಸಂಘದ ಅಧ್ಯಕ್ಷ ಅದ್ದೂರಿ ಕುಮಾರ್ ಅವರು ಒತ್ತಾಯಿಸಿದ್ದಾರೆ.

### ಮಾದಕ ವಸ್ತುಗಳ ವಿರುದ್ಧ ಇಶಾ ಫೌಂಡೇಶನ್ ಹೋರಾಟ

• ಪ್ರಜೋದಯ ವರದಿ

**ಹಾಸನ:** ನಗರದ ಇಶಾ ಚೈತನ್ಯ ಫೌಂಡೇಶನ್ ಮಾದಕ ವಸ್ತುಗಳ ವಿರುದ್ಧ ನಿರಂತರ ಹೋರಾಟದ ಮೂಲಕ ಯುವ ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತಿದೆಯೆಂದು ಜಯ ಕರ್ನಾಟಕ ಜನಪರ ವೇದಿಕೆ ಜಿಲ್ಲಾ ಗೌರವಾಧ್ಯಕ್ಷ ಡಾ. ಕೆ.ಪಿ.ಪ್ರಮೋದ್ ಅವರು ಹೇಳಿದರು.

ನಗರದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿ, ವ್ಯಸನ ಮುಕ್ತ ಸಮಾಜ ನಿರ್ಮಾಣದ ದಾರಿಯಲ್ಲಿ ಇಶಾ ಚೈತನ್ಯ ಫೌಂಡೇಶನ್ ಮಾಡುತ್ತಿರುವ ಸೇವೆ ಶ್ಲಾಘನೀಯ. ಕನ್ನಡ ಭಾಷೆ ಸಂಸ್ಕೃತಿ ಮತ್ತು ಮಾನವೀಯ ಮೌಲ್ಯಗಳ ಉಳಿವಿಗಾಗಿ ಯುವಕರು ಕೈಜೋಡಿಸಬೇಕೆಂದರು.

ವೇದಿಕೆ ಕಾನೂನು ಘಟಕದ ಅಧ್ಯಕ್ಷ ಬಿ.ಪಿ.ಸಂದೀಪ್ ಅವರು ಮಾತನಾಡಿ, ಕನ್ನಡ ಶಾಲೆಗಳು ಹಾಗು ಕನ್ನಡ ಭಾಷೆ ಉಳಿವಿನ ಬಗ್ಗೆ ಮತ್ತು ಕನ್ನಡ ಭಾಷೆ ಹುಟ್ಟಿದ ಇತಿಹಾಸದ ಬಗ್ಗೆ ತಿಳಿಸಿದರು.



ಇಶಾ ಚೈತನ್ಯ ಫೌಂಡೇಶನ್ ಮುಖ್ಯಸ್ಥ ಚೇತನ್ ಶ್ಯಾಮರಾಜ್ ಅವರು ಮಾತನಾಡಿ, ನಮ್ಮ ಕೇಂದ್ರದಲ್ಲಿ ವ್ಯಸನ ಮುಕ್ತಿ ಮಾತ್ರವಲ್ಲ ಮಾನವೀಯತೆ ಸಂಸ್ಕೃತಿ ಮತ್ತು ಶಿಸ್ತು ಬೆಳೆಸುವ ಕಾರ್ಯಗಳನ್ನು ನಡೆಸುತ್ತಿದ್ದೇವೆ. ರಾಜ್ಯೋತ್ಸವದ ಸಂಭ್ರಮವನ್ನು ಈ ನೆಲೆಯಲ್ಲಿ ಆಚರಿಸುವುದು ನಮ್ಮ ಹೆಮ್ಮೆ ಎಂದರು.

ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಕರಾಟೆ ಹಾಗು ಪಂಜ ಕುಸ್ತಿಯಲ್ಲಿ ಹಲವು ಪ್ರಶಸ್ತಿಗಳನ್ನು ಗೆದ್ದ ನಗರದ ಐಸಿರಿ ಜಿಮ್ ಮಾಲೀಕ ಗುರು ಹಾಗು ಮಮತ ದಂಪತಿ ಮಕ್ಕಳಾದ ಎಸ್.ಜಿ. ಧ್ವನಿ ಹಾಗು ಎಸ್.ಜಿ.ಹನಿ ಸಹೋದರಿಯರಿಗೆ, ರೈಫಲ್ ಮತ್ತು ಪಿಸ್ತೂಲ್ ಕ್ರೀಡೆಯಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿದ ನಗರದ ಶರತ್ ಮತ್ತು ಚಿರಂತ್ ಅವರಿಗೆ ಸನ್ಮಾನ ಮಾಡಲಾಯಿತು. ಇಶಾ ಚೈತನ್ಯ ಸಂಸ್ಥಾಪಕ ಚೇತನ್ ಶಾಮರಾಜ್ ಮತ್ತು ಅವರ ತಂದೆ ತಾಯಿಗಳಾದ ಶಾಮರಾಜ್, ಹೇಮರಾಜ್, ಹಾಸ್ಯ ನಟ ಮಂಡ್ಯ ಸಿದ್ದು, ಡಾ.ಮುತ್ತುರಾಜ್ ಇತರರಿದ್ದರು.

### ಹದಗೆಟ್ಟ ರಸ್ತೆ: ವಾಹನ ಸಂಚಾರ ತಡೆದು ಪ್ರತಿಭಟನೆ



• ಪ್ರಜೋದಯ ವರದಿ

**ಬೇಲೂರು:** ಹದಗೆಟ್ಟಿರುವ ಪಟ್ಟಣ ಸಮೀಪದ ಕಳಸಿನ ಕೆರೆ ಏರಿ ರಸ್ತೆಯನ್ನು ಸರಿಪಡಿಸುವಂತೆ ಒತ್ತಾಯಿಸಿ ತಾಲ್ಲೂಕಿನ ಜಯ ಕರ್ನಾಟಕ ಸಂಘಟನೆ ಪದಾಧಿಕಾರಿಗಳು ಕೆರೆ ಏರಿ ಮೇಲೆ ಸೋಮವಾರ ವಾಹನ ಸಂಚಾರ ತಡೆದು ಪ್ರತಿಭಟಿಸಿದರು.

ಜಯ ಕರ್ನಾಟಕ ಸಂಘಟನೆ ಜಿಲ್ಲಾಧ್ಯಕ್ಷ ಎಂ.ಕೆ.ಆರ್.ಸೋಮೇಶ್ ಅವರು ಮಾತನಾಡಿ, ವಿಶ್ವ ವಿಖ್ಯಾತ ಪ್ರವಾಸಿ ತಾಣ ಬೇಲೂರು ದೇಗುಲ ನೋಡಿದವರು ಕಳಸ, ಹೊರನಾಡು, ಶೃಂಗೇರಿ ಹಾಗು ಇತರೆ ಭಾಗಗಳಿಗೆ ಪಟ್ಟಣದಿಂದ ಅಂಬೇಡ್ಕರ್ ವೃತ್ತದ ಮೂಲಕ ಕಳಸಿನ ಕೆರೆ ಏರಿ ಮೇಲೆಯೇ ತೆರಳಬೇಕು. ಆದರೆ, ಕೆರೆ ಏರಿ ರಸ್ತೆ ಸಂಪೂರ್ಣ ಗುಂಡಿ ಬಿದ್ದು ಹಾಳಾಗಿದೆ ಎಂದು ತಿಳಿಸಿದರು.

ಮಳೆ ಬಂದರೆ ಗುಂಡಿ ಯಾವುದು ರಸ್ತೆ ಯಾವುದು ತಿಳಿಯದಂತ್ತಾಗುತ್ತದೆ. ಬೇಸಿಗೆಯಲ್ಲಿ ಕಲ್ಲುಗಳು ಮೇಲೆದ್ದು, ಧೂಳಿನಿಂದ ಜನರು ಓಡಾಡಲು ಸಮಸ್ಯೆಯಾಗುತ್ತಿದೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಎಚ್ಚೆತ್ತು ರಸ್ತೆ ದುರಸ್ತಿಗೆ ಮುಂದಾಗಬೇಕೆಂದು ಒತ್ತಾಯಿಸಿದರು.

ತಾಲ್ಲೂಕು ಅಧ್ಯಕ್ಷ ಎಸ್.ಎಂ. ರಾಜು ಅವರು ಮಾತನಾಡಿ, ಮೂಡಿಗೆರೆ -ಗೆಂಡೇಹಳ್ಳಿಗೆ ತೆರಳುವ ಕಳಸಿನ ಕೆರೆ ಏರಿ ಮೇಲಿನ ರಸ್ತೆ ಹೆಜ್ಜೆ ಹೆಜ್ಜೆಗೂ ಗುಂಡಿ ಬಿದ್ದಿದೆ. ಅದರಿಂದ ವಾಹನಗಳು ಓಡಾಡದಂತ್ತಾಗಿದೆ. ಈ ರಸ್ತೆಯಲ್ಲಿ ಬೈಕ್ ಸವಾರರು ಬಿದ್ದು ಗಾಯಗೊಂಡಿರುವ ಘಟನೆಗಳು ಸಾಕಷ್ಟು ನಡೆದಿವೆ. ರಸ್ತೆ ಅಭಿವೃದ್ಧಿಗೆ ಈಗಾಗಲೇ ಶಾಸಕರು ಅನುದಾನ ತಂದು ಟೆಂಡರ್ ಪ್ರಕ್ರಿಯೆ ಮುಗಿಸಿದ್ದರೂ ಅಧಿಕಾರಿಗಳ ಮತ್ತು ಗುತ್ತಿಗೆದಾರನ ನಿರ್ಲಕ್ಷ್ಯದಿಂದ ಕೆಲಸವಾಗುತ್ತಿಲ್ಲ. ತಕ್ಷಣವೇ ರಸ್ತೆ ನಿರ್ಮಿಸಲು ಅಧಿಕಾರಿಗಳು, ಗುತ್ತಿಗೆದಾರರು ಮುಂದಾಗಬೇಕು. ಇಲ್ಲದಿದ್ದಲ್ಲಿ ಸಂಘಟನೆಯಿಂದ ಸಂಬಂಧಿಸಿದ ಕಚೇರಿಗೆ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಎಚ್ಚರಿಸಿದರು.

ತಾಲ್ಲೂಕು ಕಾರ್ಯಾಧ್ಯಕ್ಷ ಲಕ್ಷ್ಮಣ್, ಪ್ರಧಾನ ಕಾರ್ಯದರ್ಶಿ ಮಂಜುನಾಥ್, ಯುವ ಘಟಕದ ಅಧ್ಯಕ್ಷ ಹೇಮಂತ್, ಉಪಾಧ್ಯಕ್ಷ ಕುಮಾರ್, ಮುಖಂಡರಾದ ವಸಂತಕುಮಾರ್, ಲಕ್ಷ್ಮಣ್, ಉಮೇಶ್, ಮುಖಂಡರಾದ ರಮೇಶ್, ವಿನಯ್, ಚಂದ್ರು ಇದ್ದರು.

**ಸಾಹಿತಿ ಶೈಲಜಾ ಹಾಸನ ಸಲಹೆ | ಮಾಣಿಕ್ಯ ಪ್ರಕಾಶನದಿಂದ ದತ್ತಿ ಪ್ರಶಸ್ತಿ ಪ್ರದಾನ**

# ಮೌಲ್ಯಯುತ ಬರವಣಿಗೆಯಿಂದ ಸಮಾಜ ಸುಧಾರಣೆ ಕೆಲಸವಾಗಲಿ

• ಪ್ರಜೋದಯ ವರದಿ

**ಹಾಸನ:** ಸಾಹಿತಿಗಳು ಮೌಲ್ಯಯುತ ಬರವಣಿಗೆ ಮೂಲಕ ಸಮಾಜವನ್ನು ಸರಿ ದಾರಿಗೆ ಕರೆದೊಯ್ಯುವ ಕೆಲಸ ಮಾಡಬೇಕೆಂದು ಸಾಹಿತಿ ಶೈಲಜಾ ಹಾಸನ ಅವರು ಹೇಳಿದರು.

ನಗರದ ಸಂಸ್ಕೃತ ಭವನದಲ್ಲಿ ಇತ್ತೀಚೆಗೆ ನಡೆದ ಮಾಣಿಕ್ಯ ಪ್ರಕಾಶನದ ದಶಮಾನೋತ್ಸವದಲ್ಲಿ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಶಸ್ತಿ ಪಡೆದ ಕ್ಷಣ ತಾವು ಅತ್ಯಂತ ಶ್ರೇಷ್ಠರು ಎಂದು ಭಾವಿಸಿ ಬರವಣಿಗೆ ನಿಲ್ಲಿಸಬಾರದು. ಸಾಹಿತ್ಯ ಕೃಷಿಯನ್ನು ಮುಂದುವರಿಸುತ್ತಾ ಜವಾಬ್ದಾರಿ ಮತ್ತು ಹೊಣೆಗಾರಿಕೆ ಹೆಚ್ಚಿಸಿದೆ ಎಂದು ಭಾವಿಸಬೇಕು. ಆ ಮೂಲಕ ಕಿರಿಯರಿಗೆ ಮಾದರಿ ಆಗಬೇಕಾಗಿದೆ. ಸಾಹಿತ್ಯ ಸಮಾಜವನ್ನು ಬದಲಿಸಬಲ್ಲದು ಎಂಬುದನ್ನು ವಚನ ಸಾಹಿತ್ಯ ಸಾದರಪಡಿಸಿದೆ. ವಚನ ಸಾಹಿತ್ಯ ಸಮಾಜದ ಅನೇಕ ಕುಂದು ಕೊರತೆಗಳನ್ನು ಹೋಗಲಾಡಿಸಿದೆ. ಹಾಗೆಯೇ ವಿಶ್ವ ಮಾನವ ಸಂದೇಶ ಸಾರಿದ ಕುವೆಂಪು ಅವರ ಮಂತ್ರ ಮಾಂಗಲ್ಯ ಪರಿಕಲ್ಪನೆ, ಈ ಸಮಾಜವನ್ನು ಬದಲಿಸುವ ನಿಟ್ಟಿನಲ್ಲಿ ಸಹಾಯಕವಾಗಿದೆ. ಹೊಸ ಪರಿಕಲ್ಪನೆಯನ್ನು ಇದು ಹುಟ್ಟು ಹಾಕಿದೆಯೆಂದರು.

ಸಾಹಿತಿಗಳು ಎಂದಿಗೂ ಪ್ರಶಸ್ತಿ ಪುರಸ್ಕಾರಗಳ ಹಿಂದೆ ಹೋಗದೆ ಪ್ರಶಸ್ತಿಗಳೇ ಅವರನ್ನು ಹುಡುಕಿಕೊಂಡು ಬರುವ ವಾತಾವರಣ ನಿರ್ಮಾಣ ಆಗಬೇಕು. ಅಂತಹ ಶ್ರೇಷ್ಠ ಮೌಲ್ಯಯುತ ಕೃತಿಗಳ ರಚನೆ ಮಾಡುವತ್ತ ಸಾಹಿತಿಗಳು ನಿರತರಾಗಬೇಕು. ಸಾಹಿತ್ಯದಿಂದ ಸಮಾಜದ ಬದಲಾ ವಣೆ ಮಾಡುವ ನಿಟ್ಟಿನಲ್ಲಿ ಕುಂದು ಕೊರತೆ ನೀಗಿಸುವತ್ತ ಸಾಹಿತ್ಯ ರಚಿಸುವಂತೆ ನಿರತರಾದರೆ ನಿಜಕ್ಕೂ ಕೂಡ ಇಂತಹ ಪ್ರಶಸ್ತಿಗಳನ್ನ ನೀಡುವ ಪ್ರಯತ್ನಗಳಿಗೆ ಸಾರ್ಥಕ. ತಾನಷ್ಟೇ ಬೆಳೆದು, ತನಗಷ್ಟೇ ಎಲ್ಲವೂ ಬೇಕು ಎನ್ನುವ ಸ್ವಾರ್ಥ ಸಮಾಜದ ನಡುವೆಯೂ ನಿಸ್ವಾರ್ಥ ಮನಸ್ಸಿನ ವ್ಯಕ್ತಿ ಯೊಬ್ಬರು ಜಿಲ್ಲೆಯಲ್ಲಿ ನೆಲೆಯೂರಿ ಮಾಣಿಕ್ಯ ಪ್ರಕಾಶನದಂತಹ ಪ್ರಕಾಶನ ವನ್ನು ಪ್ರಾರಂಭಿಸಿ ಉದಯೋನ್ಮುಖ ಸಾಹಿತಿಗಳ ಕೃತಿಗಳನ್ನು ಹೊರ ತರುತ್ತಿರುವುದು ಶ್ಲಾಘನೀಯ ಎಂದರು.



ಎನ್.ಶೈಲಜಾ ಹಾಸನ ದತ್ತಿ ಪ್ರಬಂಧ ಮಾಣಿಕ್ಯ ಪ್ರಶಸ್ತಿಗೆ ಧಾರವಾಡದ ಲತಾ ಹೆಗಡೆ ಅವರ ಕೃಶಕಾಯದ ಕರಕರೆ, ಧಾರವಾಡದ ನಳಿನಿ ಟಿ. ಭೀಮಪ್ಪ ಅವರ ಐಸ್ ಪೈಸ್ ಕೃತಿಗಳು ಭಾಜನವಾದವು. ದಿ॥ಸಿ.ಪಿ.ನಾರಾಯಣಾಚಾರ್ಯ ಸ್ಮಾರಕ ದತ್ತಿ ಕಾವ್ಯ ಮಾಣಿಕ್ಯ ಪ್ರಶಸ್ತಿಗೆ ಧಾರ ವಾಡದ ಎ.ಎ.ದರ್ಗಾ ಅವರ ಬೆಂದ ಬೆಳಸಿ ಹಾಗು ಚಿಕ್ಕಮಗಳೂರಿನ ಶಶಿ ತರಿಕೆರೆ ಅವರ ಪ್ಯೂಪಾ ಕೃತಿಗಳು ಹಾಗು ಮೈಸೂರಿನ ಎನ್.ಆರ್.ರೂಪಶ್ರೀ ಕಾದ ಕಂಗಳ ಕಂಪನ, ದಾವಣೆಗೆರೆಯ ಗೀತಾಮಂಜು ಬೆಣ್ಣೆಹಳ್ಳಿ ಅವರ ಕಿರು ಬೆಳಕಿನ ಸೂಜಿ ಕೃತಿಗಳು ಭಾಜನ ವಾದವು. ಪದ್ಮಾವತಿ ವೆಂಕಟೇಶ್ ದತ್ತಿ ಕಥಾ ಮಾಣಿಕ್ಯ ಪ್ರಶಸ್ತಿಗೆ ತುಮಕೂರಿನ ಹಡವನಹಳ್ಳಿ ವೀರಣ್ಣಗೌಡರ ಉರಿವ ದೀಪದ ಕೆಳಗೆ, ದಾವಣಗೆರೆಯ ಸುನೀತಾ ಪ್ರಕಾಶ್ ಅವರ ಪದ್ದವ್ವನ ಕೌದಿ ಮತ್ತು ಇತರ ಕಥೆಗಳು ಭಾಜನವಾದವು. ನಿಂಗಪ್ಪ ಮಲ್ಲಪ್ಪ ಮೇಟಿ ಸ್ಮಾರಕ ದತ್ತಿ ಸಂಶೋಧನಾ ಮಾಣಿಕ್ಯ ಪ್ರಶಸ್ತಿಗೆ ದಕ್ಷಿಣ ಕನ್ನಡದ ಸುಖಲಾಕ್ಷಿ ವೈ.ಸುವರ್ಣ ಅವರ ಮುಂಬಯಿ ಮತ್ತು ಮಹಿಳೆ, ಹಾಸನದ ಡಾ.ಹಂಪನಹಳ್ಳಿ ತಿಮ್ಮೇಗೌಡ ದಾಸೊಕ್ಕಲಿಗರು ಕೃತಿಗಳು ಭಾಜನವಾದವು. ಪ್ರಭಾವತಿ ಶೆಡ್ತಿ ದತ್ತಿ ನಾಟಕ ಮಾಣಿಕ್ಯ ಪ್ರಶಸ್ತಿಗೆ ಯಾದಗಿರಿಯ ಮಲ್ಲೇಶ ಬಿ. ಕೋನಾಳ ಅವರ ಕಲ್ಯಾಣದ ಕ್ರಾಂತಿ, ಧಾರವಾಡದ ಡಾ. ವೀಣಾ ಸಂಕನಗೌಡರ ಅವರ ಮೂರು ಮತ್ತೊಂದು ನಾಟಕಗಳು ಭಾಜನವಾದವು.

ದಿ॥ಮಹಾದೇವಮ್ಮ, ದಿ॥ಈ.ಕೃಷ್ಣಯ್ಯ ಸ್ಮಾರಕ ದತ್ತಿ ಕಾದಂಬರಿ ಮಾಣಿಕ್ಯ ಪ್ರಶಸ್ತಿಗೆ ಕೊಡಗು ಜಿಲ್ಲೆಯ ಉಳುವಂಗಡ ಕಾವೇರಿ ಉದಯ ಅವರ ಪವಿತ್ರ ಪ್ರೀತಿ ಪ್ರಾಪ್ತಿ, ಬೆಳಗಾವಿಯ ರಂಜಿತಾ ಮಹಾಜನ ಅವರ ಬೇಲಿಯನ್ನು ಭಾಜನವಾದವು. ದಿ॥ಫಾತಿಮಾಬಿ ಜನಾಬ್ ಸೈಯದ್ ಅಬ್ದುಲ್ ಘನೀ ಸಾಬ್ ಸ್ಮಾರಕ ದತ್ತಿ ಗಜಲ್ ಮಾಣಿಕ್ಯ ಪ್ರಶಸ್ತಿಗೆ ಯಾದಗಿರಿಯ ಡಾ.ಸಿದ್ದರಾಮ ಹೊನ್ಕಲ್ ಅವರ ನಿನ್ನ ಜೊತೆ ಜೊತೆಯಲಿ, ಶಿವಮೊಗ್ಗಾದ ಯು.ಸಿರಾಜ್ ಅಹಮದ್ ಅವರ ನೆಲ ನುಡಿದ ನಾದ ಭಾಜನವಾದವು. ಕೆ.ವೈ. ಕಂದಕೂರ ದತ್ತಿ ಚುಟುಕು ಮಾಣಿಕ್ಯ ಪ್ರಶಸ್ತಿಗೆ ದಕ್ಷಿಣ ಕನ್ನಡದ ಹಸೀನಾ ಮಲ್ನಾಡ್ ಹನಿಗಡಲು ಭಾಜನವಾದರೆ ದಿ॥ದೊಡ್ಡಚಂದಪ್ಪ ತಳ್ಳಿ ಪಾಟೀಲ ಸ್ಮಾರಕದತ್ತಿ ವಚನ ಮಾಣಿಕ್ಯ ಪ್ರಶಸ್ತಿಗೆ ಬೀದರ ಜಯಶ್ರೀ ಸುಕಾಲೆ ಅವರ ಶರಣ ಸೌರಭ ಭಾಜನವಾಯಿತು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019